# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶನಿವಾರ, ನವೆಂಬರ್ 09, 2024

ಸಂಪುಟ : 51 ಸಂಚಿಕೆ : 176 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ಚಿತ್ರ: ಜಿಗಳಿ ಪ್ರಕಾಶ್

## ಭರದಿಂದ ಸಾಗಿದ ಭತ್ತದ ಕಟಾವು ...

ತುಂಗಭದ್ರಾ ನದಿ ಪಾತ್ರದಲ್ಲಿ ಮತ್ತು ದೇವರಬೆಳಕೆರೆ ಪಿಕಪ್ ಡ್ಯಾಮ್ ಅಚ್ಚುಕಟ್ಟಿನಲ್ಲಿ ಮುಂಗಾರು ಹಂಗಾಮಿನ ಭತ್ತದ ಕಟಾವು ಆರಂಭವಾಗಿದ್ದು, ಭತ್ತ ಕಟಾವು ಮಾಡುವ ಯಂತ್ರಗಳಿಗೆ ಬೇಡಿಕೆ ಹೆಚ್ಚಾಗಿದೆ. ಭತ್ತಕ್ಕೆ ಆರಂಭದಲ್ಲೇ ಉತ್ತಮ ಬೆಲೆ ಸಿಗುವ ವಿಶ್ವಾಸದಲ್ಲಿರುವ ರೈತರು ಸಹ ಭತ್ತ ಒಕ್ಕಲು ಮಾಡುವ ಕೆಲಸವನ್ನು ಭರದಿಂದ ಮಾಡುತ್ತಿದ್ದಾರೆ. ಗುರುವಾರ ಜರೆಕಟ್ಟೆ ಬಳಿ ಗದ್ದೆಯಲ್ಲಿ ಮಿಷನ್ ಭತ್ತ ಕಟಾವು ಮಾಡುತ್ತಿರುವ ದೃಶ್ಯ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು.

# ರೈತರ ವಿರುದ್ಧ ವಕ್ಫ್ ಛೂ ಬಿಟ್ಟ ಕಾಂಗ್ರೆಸ್

### ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಆರೋಪ

ಬೆಂಗಳೂರು, ನ.8- ರಾಜ್ಯಾದ್ಯಂತ ವಕ್ಫ್ ಬೋರ್ಡ್ ಮೂಲಕ ಹೊಸ ಜಿಹಾದಿ ನಡೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ಸಿಗರ ನಡೆ-ನುಡಿ ಗಮನಿಸಿದರೆ ದುರುಳತನ ಅರ್ಥವಾಗುತ್ತದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ಸಿಗರು ಹುಂಬರು, ತಿಳಿವಳಿಕೆ ಇಲ್ಲದವರು ಎನ್ನುವುದಿಲ್ಲ, ಅವರೇನು ಮಾತನಾಡುತ್ತಾರೆ ಎಂಬುದು ಅವರಿಗೆ ಗೊತ್ತಿದೆ ಎಂದರು.

ವಕ್ಫ್ ಆಸ್ತಿಯನ್ನು ಕಾಂಗ್ರೆಸ್ಸಿನ ಕೆಲವು ಹಿರಿಯ ನಾಯಕರು ಲೂಟಿ ಮಾಡಿದ್ದರು, ಇದನ್ನು ಉಳಿಸುವುದಾಗಿ ಬಿಜೆಪಿ ಪ್ರಣಾಳಿಕೆಯಲ್ಲಿ ಘೋಷಿಸಿತ್ತು, ವಕ್ಫ್ ಜಾಗ ಬಾಡಿಗೆ, ಲೀಸ್ ಮೂಲಕ ಸಾವಿರಾರು ಕೋಟಿ ರೂ. ಪಡೆಯುತ್ತಿದ್ದರು, ಇದರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದೆವು, ಈಗ ರೈತರ ವಿರುದ್ಧವೇ ವಕ್ಫ್ ಬೋರ್ಡ್ ಅನ್ನು ಛೂ ಬಿಟ್ಟಿದ್ದಾರೆ.

ನೂರಾರು ವರ್ಷಗಳ ಮಂದಿರ, ಮಠ ಕಬಳಿಸಲು ಮುಂದಾಗಿದ್ದಾರೆ, ವಿಜಯಪುರ ಜಿಲ್ಲೆ ಪಡಗಾನೂರು ಗ್ರಾಮದಲ್ಲಿ ಚಾಲುಕ್ಯರು ಕಟ್ಟಿದ 1,500 ವರ್ಷಗಳ ಪುರಾತನ ದೇವಾಲಯದ ಆಸ್ತಿಯನ್ನೂ ವಕ್ಫ್ ಸಂಪತ್ತು ಎಂದು ಘೋಷಿಸಿದ್ದಾರೆ. ಕಂದಾಯ ದಾಖಲೆಯ ಕಾಲಂ ನಂಬರ್ 11ರಲ್ಲಿ ದಾಖಲಾಗಿರುವುದಾಗಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು, ಇದನ್ನು ಪ್ರಶ್ನಿಸಿದಾಗ ಸಮರ್ಪಕ ಉತ್ತರ ದೊರೆಯಲಿಲ್ಲ.

ಆಸ್ತಿಯ ಸೇಲ್ ಡೀಡ್ ಇಲ್ಲದೆ ಸಂಪತ್ತು ಕಬಳಿಸುವ ಷಡ್ಯಂತ್ರ ವಕ್ಫ್ ನಡೆಸುತ್ತಿದೆ, ಕಾಂಗ್ರೆಸ್ ಪಕ್ಷ ಭಯೋತ್ಪಾದಕರ ಬಗ್ಗೆ ಮೃದು ಧೋರಣೆ ಹೊಂದಿದೆ, ಜಮ್ಮು-ಕಾಶ್ಮೀರದ ನ್ಯಾಷನಲ್ಸ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಭಯೋತ್ಪಾದಕರನ್ನು ಕೊಲ್ಲಬಾರದು, ಪಾಕಿಸ್ತಾನದ ಜೊತೆ ಭಾರತ ಮಾತುಕತೆ ನಡೆಸಬೇಕು ಎನ್ನುತ್ತಾರೆ, ಇಂತಹವರೊಂದಿಗೆ ಕಾಂಗ್ರೆಸ್‌ನ 'ಇಂಡಿ' ಒಕ್ಕೂಟ ಇದೆ, ಕಾಂಗ್ರೆಸ್‌ಗೆ ಬುದ್ಧಿ ಭ್ರಮಣೆಯಾಗಿದೆಯೇ?

ಕಾಂಗ್ರೆಸ್‌ನ ತುಷ್ಟೀಕರಣ ಮಾಡುತ್ತಿದೆ, ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದರೆ ನಿಮ್ಮ ಮನೆಗಳನ್ನೂ ವಕ್ಫ್ ಆಸ್ತಿಯಾಗಿ ನಮೂದಿಸಬಹುದು, (2ನೇ ಪುಟಕ್ಕೆ)

# ತಂತ್ರಜ್ಞಾನದ ಧಾವಂತದಲ್ಲಿ ಕನ್ನಡದ ನಿರ್ಲಕ್ಷ್ಯ

### ಸಿರಿಗೆರೆ: 'ತರಳಬಾಳು ನುಡಿಹಬ್ಬ' ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಸ್ವಾಮೀಜಿ ಅಸಮಾಧಾನ

ಸಿರಿಗೆರೆ, ನ. 8- ಕನ್ನಡ ಭಾಷೆಗೆ ಸುಂದರ ಸೊಗಡಿದೆ, ಅಪ್ಪಟ ಕನ್ನಡದಲ್ಲಿ ಮಾತನಾಡಲು ಕಲಿಯಬೇಕು ಮತ್ತು ಎಲ್ಲರ ಜೀವನದಲ್ಲಿಯೂ ಕನ್ನಡ ಹಾಸುಹೊಕ್ಕಾಗಿರಬೇಕು ಎಂದು ಸಿರಿಗೆರೆಯ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಮತ್ತು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಇಲ್ಲಿನ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ 'ತರಳಬಾಳು ನುಡಿಹಬ್ಬ-2024' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಭಾಷೆ ಹರಿಯುವ ನದಿ ನೀರು. ಅದು ಮಲಿನವಾಗಬಾರದು. ದಿನನಿತ್ಯದಲ್ಲಿ ಬೇರೆ ಭಾಷೆಯಿಂದ ಎರವಲು ಪಡೆದು ಮಾತನಾಡುವುದು ಶೋಭಿತವಲ್ಲ. ಇಂದಿನ ಯುವಪೀಳಿಗೆಯ ವಿದ್ಯಾರ್ಥಿಗಳು ವಿಜ್ಞಾನ-ತಂತ್ರಜ್ಞಾನದ ಕಡೆಗೆ ಧಾವಿಸುತ್ತಿದ್ದಾರೆಯೇ ಹೊರತು ಕನ್ನಡವನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿ, ವಿದ್ಯಾರ್ಥಿಗಳು ತಂತ್ರಜ್ಞಾನ ಬಳಸಿಕೊಂಡೇ ಕನ್ನಡ ಸಾಹಿತ್ಯದ ಸೊಬಗು, ಕನ್ನಡದ ಅಭಿರುಚಿಯನ್ನು ಬಿತ್ತರಿಸಿ, ಬೆಳೆಸಿಕೊಳ್ಳಬೇಕು ಎಂದರು.



ಶ್ರೀಮಠದಿಂದ ಅಭಿವೃದ್ಧಿಪಡಿಸಿರುವ ಮೊಬೈಲ್ ತಂತ್ರಾಂಶ ಶಿವಶರಣರ ವಚನ ಸಂಪುಟದ ಸಾಹಿತ್ಯ ಸಿರಿ ಜೊತೆಗೆ ಸರ್ವಜ್ಞನ 945 ವಚನಗಳು, 1925 ಮಂಕುತಿಮ್ಮನ ಕಗ್ಗಗಳನ್ನು ಸೇರ್ಪಡೆ ಮಾಡಿ ಪರಿಷ್ಕೃತಗೊಳಿಸಲಾಗಿದೆ ಎಂದು ಸ್ವಾಮೀಜಿ ತಿಳಿಸಿದರು.

ದಾವಣಗೆರೆ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಭೀಮಾಶಂಕರ ಜೋಷಿ 'ಕನ್ನಡ ಸಾಹಿತ್ಯ ಮತ್ತು ಧರ್ಮ ಸಮನ್ವಯತೆ'ಯ ಬಗ್ಗೆ ಮಾತನಾಡುತ್ತಾ, ಕನ್ನಡದ ಕಹಳೆ ತರಳಬಾಳು ಶ್ರೀಮಠದಲ್ಲಿ ಮೊಳಗಿದೆ. ಪ್ರಾಚೀನ ಕಲೆಗಳ ಮೆರವಣಿಗೆ ನೋಡುಗರ ಮನ ಸೆಳೆಯಿತು. ಜಾನಪದ, ವಚನ, ದಾಸ, ತತ್ವಪದ, ಆಧುನಿಕ ಸಾಹಿತ್ಯ ಮುಂತಾದ ಹಲವಾರು ವಿಭಾಗಗಳಲ್ಲಿ ಧರ್ಮ ಸಮನ್ವಯತೆ ಮೂಡಿದೆ. ಇಂದು ಎಲ್ಲವೂ ಸಹ ನಡೆಯುವುದು ಧರ್ಮದ ಮೂಲಕ. ಧರ್ಮ ಎಂದರೆ ಮಾಡಬೇಕಾದ ಕರ್ತವ್ಯ. ನಾವು (2ನೇ ಪುಟಕ್ಕೆ)

# ಜಗಳೂರು ಪಟ್ಟಣದ ಮೂಲಸೌಕರ್ಯ ಅಭಿವೃದ್ಧಿಗೆ 5 ಕೋಟಿ ರೂ. ಅನುದಾನ

### ಶಾಸಕ ಬಿ.ದೇವೇಂದ್ರಪ್ಪ



ಜಗಳೂರು, ನ.8- ಪಟ್ಟಣದ ಮೂಲಸೌಕರ್ಯ ಅಭಿವೃದ್ಧಿಗೆ 5 ಕೋಟಿ ರೂ. ವಿಶೇಷ ಅನುದಾನ ಮಂಜೂರಾಗಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದಲ್ಲಿ ಇಂದು ಸಾರ್ವಜನಿಕ ಆಸ್ಪತ್ರೆ ಮುಂಭಾಗ ಆಯೋಜಿಸಿದ್ದ ಸಮಾರಂಭದಲ್ಲಿ 2023-24 ನೇ ಸಾಲಿನ ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಸಮಗ್ರ ಅಭಿವೃದ್ದಿ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ವಿಶೇಷ ಯೋಜನೆಯಡಿ 2 ಕೋಟಿ ರೂ.ವೆಚ್ಚದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಪಟ್ಟಣದ ಹೃದಯ ಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದವರು ವಾಸವಿದ್ದಾರೆ. ಕಿಷ್ಕಿಂಧೆಯಾಕಾರದ ರಸ್ತೆಯ ಬದಿಯಲ್ಲಿ ಸುಗಮ ಸಂಚಾರವಿಲ್ಲದೆ ಹರಸಾಹಸ ಪಡುವಂತಾಗಿದೆ. ಆದ್ದರಿಂದ ಸಾರ್ವಜನಿಕ ಆಸ್ಪತ್ರೆಯಿಂದ ಉಜ್ಜಿನಿ ರಸ್ತೆಯವರೆಗೆ ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಮೊದಲ ಹಂತದಲ್ಲಿ 2 ಕೋಟಿ ರೂ. ವೆಚ್ಚದ ಕಾಮಗಾರಿಗೆ ಆದ್ಯತೆ ನೀಡಲಾಗಿದೆ. ನಂತರ ಹಂತ ಹಂತವಾಗಿ ಪಟ್ಟಣದ ವಿವಿಧ ವಾರ್ಡ್ ಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದ ಸರ್ಕಾರ ದಲಿತ, ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಪರವಾದ ಆಡಳಿತ ನಡೆಸುತ್ತಿದೆ. ಕಾಮಗಾರಿ ಅನುಷ್ಠಾನ ಕೆಐಆರ್ ಡಿಎಲ್ ಇಲಾಖೆಗೆ ವಹಿಸಲಾಗಿದೆ. ಅಧಿಕಾರಿಗಳು ಗುಣಮಟ್ಟದ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದರು.

ಹಳೇ ತಾಲ್ಲೂಕು ಕಛೇರಿ ನೆಲಸಮಗೊಳಿಸಿ ವಿವಿಧ ಕಛೇರಿ ಗಳ ಸಂಕೀರ್ಣ ಭವನ ನಿರ್ಮಾಣಕ್ಕೆ 10 ಕೋಟಿ ರೂ., ಪಟ್ಟಣದ ಅಭಿವೃದ್ದಿಗಾಗಿ 8 ಕೋಟಿ ರೂ. ಸೇರಿದಂತೆ ಇತರೆ ಅಭಿವೃದ್ದಿ ಕಾಮಗಾರಿಗಳಿಗೆ ಮೊದಲ ಹಂತದಲ್ಲಿ ಸುಮಾರು 20 ಕೋಟಿ ರೂ. ಅನುದಾನ ನೀಡಿರುವ ನಮ್ಮದೇ ಪಕ್ಷದ ರಾಜ್ಯದಲ್ಲಿನ ಆಡಳಿತಾರೂಢ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವರುಗಳಿಗೆ ಅಭಿನಂದಿಸುವುದಾಗಿ ಶಾಸಕರು ತಿಳಿಸಿದರು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ಮುಖಂಡರಾದ ಕೆ.ಪಿ.ಪಾಲಯ್ಯ, ಎಂ.ಡಿ. ಕೀರ್ತಿಕುಮಾರ್, (2ನೇ ಪುಟಕ್ಕೆ)

# ಮಹಾನಗರ ಪಾಲಿಕೆಯಿಂದ 13 ರಿಂದ ಇ-ಆಸ್ತಿ ಆಂದೋಲನ

ದಾವಣಗೆರೆ, ನ.8- ಮಹಾನಗರಪಾಲಿಕೆ ವತಿಯಿಂದ ಏಕಗವಾಕ್ಷಿಯಡಿ ಇ-ಆಸ್ತಿ ವಿಶೇಷ ಆಂದೋಲನವನ್ನು ನವಂಬರ್ 13 ರಿಂದ ಡಿಸೆಂಬರ್ 31 ರವರೆಗೆ ಮಹಾನಗರಪಾಲಿಕೆಯ 3 ವಲಯ ಕಚೇರಿಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರು ತಮ್ಮ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಈ ಆಂದೋಲನದಲ್ಲಿ ಕಡ್ಡಾಯವಾಗಿ ಸಲ್ಲಿಸಿ, ತ್ವರಿತವಾಗಿ ಇ-ಆಸ್ತಿ (ನಮೂನೆ-2) ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ಇ-ಆಸ್ತಿ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು:** ಸ್ವತ್ತಿನ ಮಾಲೀಕತ್ವದ ದಾಖಲೆಗಳು ಕ್ರಯ, ದಾನ, ಪಾಲುವಿಭಾಗ ಹಾಗೂ ಇತರೆ ನೊಂದಣಿ ದಾಖಲೆಗಳು, ಸ್ವತ್ತಿನ ಮಾಲೀಕರ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಸ್ವತ್ತಿನ ಛಾಯಾಚಿತ್ರ, ಮಾಲೀಕರ ಗುರುತಿನ ದಾಖಲೆ ಮತದಾರರ ಗುರುತಿನ ಚೀಟಿ, ಪ್ಯಾನ್ ಕಾರ್ಡ್, ಸಕ್ಷಮ ಪ್ರಾಧಿಕಾರದಿಂದ ಪಡೆದ ಬಡಾವಣೆ ಅನುಮೋದನೆ ಪತ್ರ ಹಾಗೂ ನಕ್ಷೆ, ಕಟ್ಟಡ ಪರವಾನಿಗೆ (2ನೇ ಪುಟಕ್ಕೆ)

## ತೆರಿಗೆ ವಸೂಲಿಗೆ ಅಧಿಕಾರಿ, ಸಿಬ್ಬಂದಿಗಳ ತಂಡ ರಚನೆ

ದಾವಣಗೆರೆ, ನ.8- ಪ್ರಸಕ್ತ ಸಾಲಿನ ಆರ್ಥಿಕ ವರ್ಷವು ಮಾರ್ಚ್-2025ಕ್ಕೆ ಮುಕ್ತಾಯವಾಗಲಿದ್ದು, ಮಹಾ ನಗರಪಾಲಿಕೆಯಿಂದ ಆಸ್ತಿ ತೆರಿಗೆ, ನೀರಿನ ದರ, ಒಳಚರಂಡಿ ಸೇವಾ ಶುಲ್ಕಗಳನ್ನು ಪಾವತಿಸಿಕೊಳ್ಳುವುದಕ್ಕಾಗಿ ಪ್ರತಿ ವಾರ್ಡ್‌ಗಳಿಗೆ ಅಧಿಕಾರಿ, ಸಿಬ್ಬಂದಿಗಳ ತಂಡವನ್ನು ರಚಿಸಲಾಗಿದೆ.

ಈ ಅಧಿಕಾರಿ, ಸಿಬ್ಬಂದಿಗಳು ತಮ್ಮ ಸ್ವತ್ತಿಗೆ ಭೇಟಿ ನೀಡಿದಾಗ ಬಾಕಿಯಿರುವ ತೆರಿಗೆಯ ಶುಲ್ಕಗಳನ್ನು ಪಾವತಿಸಬೇಕು. ತೆರಿಗೆ ಬಾಕಿಯಿದ್ದಲ್ಲಿ, ಬಾಕಿಯಿರುವ ಮಾಹೆಯಿಂದ ಪ್ರತಿ ಮಾಹೆಗೆ ಶೇ.2 ರಷ್ಟು ದಂಡ ವಿಧಿಸಲಾಗುವುದೆಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

# ನಗರದ ಪಿ.ಜೆ. ಬಡಾವಣೆ ಆಸ್ತಿಯ ಪಹಣಿಗಳಲ್ಲಿ ವಕ್ಫ್ ಸಂಸ್ಥೆ ಹೆಸರು

### ಸ್ಥಳೀಯರಲ್ಲಿ ಆತಂಕ

ದಾವಣಗೆರೆ, ನ.8- ರೈತರ ಜಮೀನು, ಮಠ, ಮಂದಿರಗಳು ವಕ್ಫ್‌ಗೆ ಸೇರಿರುವ ಕುರಿತು ನೋಟೀಸುಗಳು ಬಂದ ಸುದ್ದಿಗಳ ನಂತರ ಇದೀಗ ನಗರದ ಪ್ರತಿಷ್ಠಿತ ಬಡಾವಣೆಯೂ ವಕ್ಫ್‌ಗೆ ಸೇರಿದ ಬಗ್ಗೆ ಪಹಣಿಯಲ್ಲಿ ನಮೂದಾಗಿದೆ. ನಗರದ ಪಿ.ಜೆ. ಬಡಾವಣೆಯ ಎವಿಕೆ ಕಾಲೇಜು ಬಳಿಯ ಸರ್ವೆ ನಂಬರ್ 53ವುಳ್ಳ 4 ಎಕರೆ 13 ಗುಂಟೆ ಪ್ರದೇಶ ಅಂದರೆ ಒಂದು ಏರಿಯಾ ಪೂರ್ಣ ವಕ್ಫ್‌ಗೆ ಸೇರಿದ ಬಗ್ಗೆ ಪಹಣಿಯಲ್ಲಿ ನಮೂದಾಗಿದೆ. ಈ ಪ್ರದೇಶ 1993ರಲ್ಲಿ ಖಾಸಗಿ ಬಡಾವಣೆಯಾಗಿತ್ತು. 2015ರಲ್ಲಿ ಮ್ಯುಟೇಷನ್ ರಿಜಿಸ್ಟರ್ ಆಗಿತ್ತು. ಈ ವೇಳೆ ಎಂ.ಆರ್. ನಂಬರ್ ಅದಲು ಬದಲು ಮಾಡಿ ಆದೇಶಿಸಲಾಗಿತ್ತು ಎನ್ನಲಾಗಿದೆ. 9 ವರ್ಷದ ಹಿಂದೆ ಪಹಣಿಯಲ್ಲಿ ವಕ್ಫ್ ಹೆಸರು ಸೇರಿಸಲಾಗಿದ್ದು, ಇದೀಗ ಖಬರಸ್ಥಾನ ಸುನ್ನಿ ವಕ್ಫ್ ಸಂಸ್ಥೆ ಎಂದು ಪಹಣಿಯಲ್ಲಿ ನಮೂದಾಗಿದೆ. ಸಾಕಷ್ಟು ವರ್ಷಗಳಿಂದ ಜೀವನ ನಡೆಸುತ್ತಿರುವ ಅಲ್ಲಿನ ನಾಕರಿಕರಿಗೆ ಈಗ ಆತಂಕ ಶುರುವಾಗಿದೆ.


## ಸಿ. ಹಾಲಪ್ಪ ರೆಡ್ಡಿ ನಿಧನ



ದಾವಣಗೆರೆ ಸಿಟಿ, ವಿನಾಯಕ ಬಡಾವಣೆ (ವಿದ್ಯಾನಗರ) 3ನೇ ಕ್ರಾಸ್ ವಾಸಿ **ಶ್ರೀಮತಿ ಯಲ್ಲಮ್ಮರವರ ಪತಿ** ನಿವೃತ್ತ ಕಾರ್ಯಪಾಲಕ ಅಭಿಯಂತರರಾದ **ಸಿ. ಹಾಲಪ್ಪ ರೆಡ್ಡಿ (95)** ಅವರು ದಿನಾಂಕ: 08-11-2024 ರಂದು ಶುಕ್ರವಾರ ರಾತ್ರಿ 7:50 ಕ್ಕೆ ನಿಧನರಾದರು.

ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ **ಮೃತರ ಅಂತ್ಯಕ್ರಿಯೆಯು ದಿನಾಂಕ: 09-11-2024ರ ಶನಿವಾರ ಮಧ್ಯಾಹ್ನ 2 ಗಂಟೆಗೆ** ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು, ಬಿಳಸನೂರು ಗ್ರಾಮದ ನಂದಿಗಾವಿ ರಸ್ತೆಯ ಮೃತರ ತೋಟದಲ್ಲಿ ನೆರವೇರಲಿದೆ.

ಮೃತರ ಪಾರ್ಥಿವ ಶರೀರವನ್ನು ಮಧ್ಯಾಹ್ನ 12 ಗಂಟೆಯವರೆಗೆ ವಿನಾಯಕ ಬಡಾವಣೆ 3ನೇ ಕ್ರಾಸ್‌ನಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.

ದುಃಖತಪ್ತ ಕುಟುಂಬ ವರ್ಗ: 97390 56255, 94484 22866


## ಅಮೇರಿಕಾ: ವಲಸಿಗರಿಗೆ ಪೌರತ್ವ ನೀಡುವ ನೀತಿ ರದ್ದು

ವಾಷಿಂಗ್ಟನ್, ನ.8- ಜೋ ಬೈಡನ್ ಆಡಳಿತವು ಜಾರಿಗೆ ತಂದಿದ್ದ ನೀತಿಯೊಂದನ್ನು ಫೆಡರಲ್ ನ್ಯಾಯಾಧೀಶರು ಗುರುವಾರ ರದ್ದುಗೊಳಿಸಿದ್ದಾರೆ.

ವಲಸಿಗ ಕುಟುಂಬಗಳಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಅಮೆರಿಕದ ಅಧ್ಯಕ್ಷರು ಜಾರಿಗೊಳಿಸಿರುವ ಅತಿದೊಡ್ಡ ಕಾರ್ಯಕ್ರಮ ಇದು ಎಂದು ಈ ನೀತಿಯನ್ನು ಬಣ್ಣಿಸಲಾಗಿತ್ತು.

ಅಮೆರಿಕದ ಪ್ರಜೆಗಳನ್ನು ಮದುವೆಯಾಗಿ ರುವ ವಲಸಿಗರು ತಮ್ಮ ಬಳಿ ಸೂಕ್ತ ದಾಖಲೆಗಳು ಇಲ್ಲದಿದ್ದರೂ, ದೇಶವನ್ನು ತೊರೆಯದೆಯೇ 'ಗ್ರೀನ್ ಕಾರ್ಡ್'ಗೆ ಅರ್ಜಿ ಸಲ್ಲಿಸಲು ಈ ನೀತಿ ಅವಕಾಶ ಮಾಡಿಕೊಟ್ಟಿತ್ತು.

ಗಡೀಪಾರು ಆತಂಕ ಎದುರಿಸುತ್ತಿದ್ದ ಸುಮಾರು 5 ಲಕ್ಷ ವಲಸಿಗರು ಇದರಿಂದ ತಾತ್ಕಾಲಿಕವಾಗಿ ನಿರಾಳರಾಗಿದ್ದರು. ಆದರೆ, ಈ ನೀತಿಗೆ ಆಕ್ಷೇಪ ವ್ಯಕ್ತಪಡಿಸಿ ಅರ್ಜಿಗಳು ಸಲ್ಲಿಕೆಯಾದ್ದರಿಂದ ಫೆಡರಲ್ ನ್ಯಾಯಾಧೀಶ ಕೆ. ಕ್ಯಾಂಪ್‌ಬೆಲ್ ಬಾರ್ಕರ್ ಅವರು ಆಗಸ್ಟ್ (2ನೇ ಪುಟಕ್ಕೆ)


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಎಂಸಿಸಿ ಬಿ ಬ್ಲಾಕ್, 12ನೇ ಮೇನ್ ವಾಸಿ ದಿ. ಹೆಚ್.ಸಿ. ದೊಡ್ಡವೀರಣ್ಣ ಮತ್ತು ಮಕ್ಕಳು ಹಾಗೂ ಸಹೋದರರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 05.11.2024ನೇ ಮಂಗಳವಾರ ಮಧ್ಯಾಹ್ನ 12.30ಕ್ಕೆ ನಮ್ಮ ಪೂಜ್ಯ ತಾಯಿಯವರಾದ **ಹೊರಕೇರಿ ಶ್ರೀಮತಿ ನಿಂಗಮ್ಮನವರು** ಲಿಂಗೈಕ್ಯರಾದ ಪ್ರಯುಕ್ತ, ಮೃತರ ಆತ್ಮಶಾಂತಿಗಾಗಿ

'ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ : 09.11.2024ನೇ ಶನಿವಾರ ಬೆಳಿಗ್ಗೆ 11.30ಕ್ಕೆ ಶ್ರೀ ಸದ್ಯೋಜಾತ ಹಿರೇಮಠ, ವಾಟರ್ ಟ್ಯಾಂಕ್ ಪಾರ್ಕ್ ಹತ್ತಿರ ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಪುತ್ರ :ಶ್ರೀ ಹೆಚ್.ವಿ. ರುದ್ರೇಶ್ ಶ್ರೀಮತಿ ಜ್ಯೋತಿ ಮಾಲೀಕರು, ಶ್ರೀ ವಿನಾಯಕ ಟ್ರೇಡರ್ಸ್ (ಫೆವಿಕಾಲ್ ಡಿಸ್ಟ್ರಿಬ್ಯೂಟರ್) ಮತ್ತು ಅಕುಲ್ ಟ್ರೇಡರ್ಸ್ ಹಾಗೂ ನಿರ್ದೇಶಕರು, ದಾವಣಗೆರೆ ಕ್ಲಬ್

ಪುತ್ರಿಯರಾದ :ಶ್ರೀಮತಿ ಪುಷ್ಪಲತಾ ಶ್ರೀ ಹೆಚ್‌ಸಿ. ಶಿವಶಂಕರ, ಶ್ರೀಮತಿ ವೀಣಾ ಶ್ರೀ ಲಿಂಗರಾಜು ಜಿ.ಎನ್ ಹೊರಕೇರಿ ವಂಶಸ್ಥರು, ಬುಳ್ಳಾಪುರ ಮತ್ತು ಕಂಬತ್ತರು ವಂಶಸ್ಥರು, ಸಿದ್ದಯ್ಯನಕೋಟೆ ಹಾಗೂ ಬಂಧು-ಮಿತ್ರರು. ಮೊ. : 99456 66800, 98807 64646

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



## ಪುಣ್ಯಸ್ಮರಣೆ



ಶ್ರೀ ಅಂದನೂರು ಶಿವಲಿಂಗಪ್ಪನವರು
44ನೇ ವರ್ಷದ ಸವಿನೆನಪುಗಳು
ನಿಧನ : 9-11-1980

ಶ್ರೀಮತಿ ಪುಟ್ಟಮ್ಮನವರು
26ನೇ ವರ್ಷದ ಸವಿನೆನಪುಗಳು
ನಿಧನ : 14-11-1998

ಅಂದನೂರು ಸೆರಾಮಿಕ್ಸ್

andanur ceramics

310/ಎ,ಬಿ.ಸಿ.ಡಿ., ಶ್ರೀ ಮಹೇಶ್ವರ ಕಾಂಪ್ಲೆಕ್ಸ್, ಪೂಜಾ ಇಂಟರ್‌ನ್ಯಾಷನಲ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ-577002.

ಮೊ: 98800 99550, 98800 99551

- ಶ್ರೀ ಅಂದನೂರು ಮುರುಗೇಶಪ್ಪ ಶ್ರೀಮತಿ ಗೌರಮ್ಮ
- ಶ್ರೀ ಪಂಚಾಕ್ಷರಿ ದಿ॥ ಶ್ರೀಮತಿ ಸಿ.ಪಿ. ಸುನಂದ
- ಶ್ರೀ ಅಂದನೂರು ಬಾಬಣ್ಣ ಶ್ರೀಮತಿ ಗಿರಿಜಾ
- ಶ್ರೀಮತಿ ಕೆ.ಸಿ. ಶಾಂತ, ಶ್ರೀ ಕೆ.ಸಿ. ಚಂದ್ರಶೇಖರ್
- ಶ್ರೀ ಅಂದನೂರು ಮುಪ್ಪಣ್ಣ ದಿ. ಶ್ರೀಮತಿ ಸಂಧ್ಯಾ
- ಶ್ರೀ ಅಂದನೂರು ಮಲ್ಲಿಕಾರ್ಜುನ್ ಶ್ರೀಮತಿ ವಿದ್ಯಾ
- ಶ್ರೀ ಅಂದನೂರು ಶಿವಲಿಂಗಪ್ಪ, ಪುಟ್ಟಮ್ಮನವರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಬಳಗದವರು.





ಡಾ॥ ಭಾಸ್ಕರ್ ಎಂ.ವಿ.

ಎಂಬಿಬಿಎಸ್., ಎಂ.ಡಿ.ಡಿ.ಎಂ., ಎಫ್.ಆರ್.ಸಿ.ಆರ್. ಎಂಡೋವಾಸ್ಕುಲರ್ ಸರ್ಜನ್, ಇಂಟರ್‌ವೆನ್ಷನಲ್ ರೇಡಿಯಾಲಜಿಸ್ಟ್, 15 ವರ್ಷಗಳ ಅನುಭವ

ಉಚಿತ ದಾವಣಗೆರೆಯಲ್ಲಿ ವೆರಿಕೋಸ್ ವೆಯಿನ್ಸ್ ಸಮಾಲೋಚನೆ

ಆಲೂರು ಚಂದ್ರಶೇಖರಪ್ಪ ಮೇಮೋರಿಯಲ್ ಆಸ್ಪತ್ರೆ

295, 2ನೇ ಮುಖ್ಯ ಕಾಲೇಜು ರಸ್ತೆ, ಪಿಜೆ ಎಕ್ಸ್‌ಟೆನ್ಷನ್, ಎವಿಕೆ ಕಾಲೇಜ್ ರಸ್ತೆ, ದಾವಣಗೆರೆ.

ದಿ. : 10.11.2024 ಬುಧವಾರ, ಸಮಯ : ಬೆ.10.00 ರಿಂದ 4.00 ರವರೆಗೆ

ಉಚಿತ ಕಲರ್ ಡಾಪ್ಲರ್ ಸ್ಕ್ರೀನಿಂಗ್ ವೈದ್ಯರಿಂದ ಅಗತ್ಯವೆಂದು ಕಂಡುಬಂದಲ್ಲಿ ಸ್ಕ್ಯಾನ್ ಮಾಡಲಾಗುತ್ತದೆ.

ಮುಂಗಡ ಕಾಯ್ದಿರಿಸುವಿಕೆಗಾಗಿ 96322 12204

"ಲೇಸರ್ ಚಿಕಿತ್ಸೆಯು (ಉಬ್ಬಿರುವ ರಕ್ತನಾಳಗಳನ್ನು) ಶಾಶ್ವತವಾಗಿ ಗುಣಪಡಿಸುತ್ತದೆ"

# ಕನ್ನಡ ನಾಡು ನುಡಿಯ ಮೇಲೆ ಸದಾಭಿಮಾನ ಬೆಳೆಸಿಕೊಳ್ಳಬೇಕು

## ತರಳಬಾಳು ನುಡಿಹಬ್ಬ 2024 ಕಾರ್ಯಕ್ರಮದ ಚರ್ಚಾಗೋಷ್ಠಿಯಲ್ಲಿ ಡಾ.ಎಚ್.ವಿ.ವಾಮದೇವಪ್ಪ ಕರೆ

ಸಿರಿಗೆರೆ, ನ. 8 - ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಮತ್ತು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶುಕ್ರವಾರ ತರಳಬಾಳು ನುಡಿಹಬ್ಬ 2024 ಕಾರ್ಯಕ್ರಮದ ಚರ್ಚಾಗೋಷ್ಠಿ ಜರುಗಿತು.




ಗೋಷ್ಠಿಯಲ್ಲಿ ಕನ್ನಡದ ಅಸ್ಮಿತೆ ಕನ್ನಡಿಗರಿಂದ ಸಾಧ್ಯ ಹಾಗೂ ಕನ್ನಡ ಮಾಧ್ಯಮದ ಕಲಿಕೆ ಉದ್ಯೋಗಕ್ಕೆ ಪೂರಕ ಎಂಬ ವಿಷಯದ ಕುರಿತು ದಾವಣಗೆರೆ ವಿಶ್ವವಿದ್ಯಾಲಯದ ವಿವಿಧ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಚರ್ಚೆ ವಿಷಯ ಮಂಡಿಸಿದರು.

ಹಿರಿಯೂರಿನ ವಿಶ್ರಾಂತ ಪ್ರಚಾರ್ಯರಾದ ಎಂ.ಜಿ.ರಂಗಸ್ವಾಮಿ ಮಾತನಾಡಿ ನಮ್ಮ ಮನಸ್ಸಿನಲ್ಲಿ ಕನ್ನಡ ಉಳಿಸಿಕೊಳ್ಳುವ, ಇತರ ಭಾಷೆಗಳನ್ನು ಗೌರವಿಸುವ ರೂಢಿಯನ್ನು ಬೆಳೆಸಿಕೊಂಡಾಗ ಮಾತ್ರ ಕನ್ನಡ ಭಾಷೆಯ ಅಸ್ಮಿಯತೆ ಉಳಿಯುತ್ತದೆ. ಡಾ.ರಾಜಕುಮಾರ್, ಸರ್.ಎಂ.ವಿಶ್ವೇಶ್ವರಯ್ಯ ಅವರು ಕನ್ನಡದಲ್ಲಿಯೇ ಓದಿ ಉನ್ನತ ಸ್ಥಾನ ಪಡೆದಿದ್ದಾರೆ. ಎಲ್ಲರಿಗೂ ಭಾಷೆ ಮೇಲೆ ಹಿಡಿತವಿರಬೇಕು. ಭಾಷೆಯನ್ನು ಗೌರವಿಸಿ, ಉಳಿಸಿ ಬೆಳೆಸಲು ಎಲ್ಲರೂ ಪ್ರಯತ್ನಿಸಿ ಎಂದರು.

ಶ್ರೀ ಸಂಸ್ಥೆಯ ಆಡಳಿತಾಧಿಕಾರಿ ಡಾ.ಎಚ್.ವಿ.ವಾಮದೇವಪ್ಪ ಮಾತನಾಡಿ ತರಳಬಾಳು ನುಡಿ ಹಬ್ಬ ನಿರಂತರವಾಗಿ ನಡೆಯಲಿ. ಈ ಕಾರ್ಯಕ್ರಮವು ಸಾಹಿತ್ಯಾಸಕ್ತರನ್ನು ಆಕರ್ಷಿಸುತ್ತಿದೆ. ಕನ್ನಡದ ವಿದ್ವಾಂಸರು ಕನ್ನಡವನ್ನು ಉಸಿರಾಗಿಸಿ ಕೊಂಡು ಕನ್ನಡ ಭಾಷೆಯ ಪ್ರಭಾವವನ್ನು ಹೆಚ್ಚಿಸಿದರು. ನಮ್ಮಲ್ಲಿ ಅಭಿಮಾನವಿರಬೇಕೆ ಹೊರತು ದುರಾಭಿಮಾನ ಇರಬಾರದು. ಕನ್ನಡ ನಾಡು ನುಡಿಯ ಬಗ್ಗೆ ಸದಾಭಿಮಾನ ಬೆಳೆಸಿ ಕನ್ನಡ ಭಾಷೆಗೆ ಹೆಚ್ಚಿನ ಒತ್ತು ನೀಡಿ ಎಂದರು.

ದಾವಣಗೆರೆ ವಿಶ್ವವಿದ್ಯಾಲಯದ ಡಾ.ವಿ. ಜಯರಾಮಯ್ಯ ಮಾತನಾಡಿ ಕನ್ನಡಕ್ಕೆ 2300 ವರ್ಷಗಳ ಇತಿಹಾಸವಿದೆ. ಕನ್ನಡದ ಮೊಟ್ಟ ಮೊದಲ ಗ್ರಂಥ ಕವಿರಾಜ ಮಾರ್ಗವು ಸಹ ಕನ್ನಡ ಅಸ್ಮಿತೆಯಿಂದಲೇ ಹೆಸರುವಾಸಿಯಾಗಿದೆ. ಸಾಮಾನ್ಯ ಜನರಿಗೆ ಕನ್ನಡ ಭಾಷೆಯ ಸರಣೀಕರಣವಾದದ್ದು ವಚನ ಸಾಹಿತ್ಯದ ಭಾಷೆಯ ಪ್ರಭಾವದಿಂದ. ಬ್ರಿಟಿಷರ ಆಳ್ವಿಕೆಯ ನಂತರ ಕನ್ನಡವು ಅಸ್ಮಿತೆ ಉಳಿಸಿಕೊಂಡಿದೆ ಎಂದರು.

ಚರ್ಚಾಗೋಷ್ಠಿಯಲ್ಲಿ ಸಿರಿಗೆರೆಯ ಎಂ.ಬಿ. ಆರ್ ಕಾಲೇಜಿನ ಶ್ರೀರಕ್ಷಾ ಪ್ರಥಮ, ಹರಿಹರದ ಕಾಕಂಬಿ ದ್ವಿತೀಯ, ದಾವಣಗೆರೆಯ ವೈಷ್ಣವಿ ತೃತೀಯ ಸ್ಥಾನಗಳನ್ನು ಪಡೆದು ತಲಾ 8000, 5000, 3000 ನಗದು ಬಹುಮಾನಗಳನ್ನು ಪಡೆದರು.

ಸಂಜೆ 6.30ಕ್ಕೆ ಮಸಾರಿ-ನೆಲ್ಕುದುರಿ ಹಗರಿ ಬೊಂಬೆನಳ್ಳಿಯ ರಂಗಲೋಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ರೈತರಧ್ವನಿ ನಾಟಕ, ಸಿರಿಗೆರೆ ಎಂ.ಬಿ.ಆರ್ ಕಾಲೇಜಿನಿಂದ ಬೆಟ್ಟದ ಮೇಲೊಂದು ಮನೆಯ ಮಾಡಿ ನಾಟಕ, ಬಿ.ಎಲ್.ಆರ್ ಕಾಲೇಜಿನಿಂದ ಟ್ಯಾಬ್ಲೆಟ್ ನಾಟಕಗಳು ಪ್ರದರ್ಶನಗೊಂಡವು.

ಕಾರ್ಯಕ್ರಮದಲ್ಲಿ ಬೆಂಗಳೂರು ನಗರದ ಕಸಾಪ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಎಚ್.ಎನ್.ವಸಂತ್ ಕುಮಾರ್, ವಿದ್ಯಾಸಂಸ್ಥೆಯ ಕನ್ನಡ ಶಿಕ್ಷಕರು, ಉಪನ್ಯಾಸಕರು, ಶಾಲಾ-ಕಾಲೇಜುಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಇದ್ದರು.



# ಹರಿಹರದಲ್ಲಿ ವಿಜೃಂಭಣೆಯ ಸಹಸ್ರಾರ್ಜುನ ಮಹಾರಾಜರ ಜಯಂತಿ

ಹರಿಹರ, ನ. 8 - ನಗರದಲ್ಲಿ ಎಸ್.ಎಸ್.ಕೆ. ಸಮಾಜದ ವತಿಯಿಂದ ನಡೆದ ಸಹಸ್ರಾರ್ಜುನ ಮಹಾರಾಜರ ಜಯಂತಿ ಅಂಗವಾಗಿ ಶ್ರೀ ಸಹಸ್ರಾರ್ಜುನ ಮಹಾರಾಜರ ಭಾವ ಚಿತ್ರದ ಮೆರವಣಿಗೆಯನ್ನು ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ಆಚರಿಸಲಾಯಿತು.

ಮೆರವಣಿಗೆ ದೇವಸ್ಥಾನ ರಸ್ತೆಯ ಶ್ರೀ ಸಹಸ್ರಾರ್ಜುನ ವೃತ್ತದಿಂದ ಆರಂಭಗೊಂಡು ದೊಡ್ಡಿ ಬೀದಿ, ಹಳೆ ಪಿ.ಬಿ. ರಸ್ತೆ, ಗಾಂಧಿ ವೃತ್ತ, ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮೂಲಕ ಹಾದು ಪುನಃ ಸಹಸ್ರಾರ್ಜುನ ವೃತ್ತಕ್ಕೆ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಸಮಳ, ಪುರವಂತ ವಡಪುಗಳು, ಡೊಳ್ಳು, ಡಿಜೆ. ಸೌಂಡ್ ಸಿಸ್ಟಮ್, ಬ್ಯಾಂಡ್ ಸೇಟ್ ವಾದಕ ಸೇರಿದಂತೆ ಇತರೆ ಕಲಾ ಮೇಳಗಳು ಮೆರವಣಿಗೆಗೆ ಮೆರಗನ್ನು ನೀಡಿದವು.

ಈ ಸಂದರ್ಭದಲ್ಲಿ ಎಸ್.ಎಸ್.ಕೆ. ಸಮಾಜದ ಅಧ್ಯಕ್ಷ ಮೋಹನ್ ಖೀರೋಜಿ, ಉಪಾಧ್ಯಕ್ಷ ಪರುಶುರಾಮ್ ಕಾಟ್ವೆ, ಖಜಾಂಚಿ ತುಳಜಪ್ಪ ಭೂತೆ, ಮುಖಂಡ ಅಂಬಾಸಾ ಮೆಹರ್ವಾಡೆ, ರಮೇಶ್ ಕಾಟ್ವೆ, ರಾಘವೇಂದ್ರ, ವಿನಾಯಕ ಲದ್ವಾ, ಗಣೇಶ ಮೆಹರ್ವಾಡೆ, ಶ್ರೀಕಾಂತ್ ಮೆಹರ್ವಾಡೆ, ಈಶ್ವಸಾ, ಕೃಷ್ಣ ಪಿ. ರಾಜೋಳ್ಳಿ, ಅಶೋಕ ಭೂತೆ, ಮೋತಿಲಾಲ್ ಖರೋಜಿ, ಶ್ರೀಪಾದ್, ರಾಜು ಖೀರೋಜಿ, ದುರ್ಗಾಸಾ, ಅಂಬುಜಾ ಪಿ. ರಾಜೋಳ್ಳಿ, ರೂಪಾ ಕಾಟ್ವೆ, ಸೇವಂತಿ ಭಾಯಿ ಭೂತೆ, ಇತರರು ಹಾಜರಿದ್ದರು.

# ತಿರುಪತಿ ಲಾಡು ತನಿಖೆ ಸಿಬಿಐಗೆ: ಅರ್ಜಿ ವಜಾಗೊಳಿಸಿದ ಸುಪ್ರೀಂ

ನವದೆಹಲಿ, ನ.8- ತಿರುಪತಿ ಲಾಡು ತಯಾರಿಸಲು ಪ್ರಾಣಿಗಳ ಕೊಬ್ಬಿನಾಂಶ ಬಳಕೆ ಮಾಡಲಾಗಿದೆ ಎಂಬ ಆರೋಪದ ಕುರಿತ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ಮತ್ತು 'ಗ್ಲೋಬಲ್ ಪೀಸ್ ಇನಿಷಿಯೇಟಿವ್'ನ ಅಧ್ಯಕ್ಷ ಕೆ.ಎ.ಪೌಲ್ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಲು ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ನ್ಯಾಯಪೀಠ ನಿರಾಕರಿಸಿದೆ.

ನಿಮ್ಮ ಮನವಿಯನ್ನು ಪರಿಗಣಿಸಿದರೆ ದೇವಸ್ಥಾನ ಮತ್ತು ಗುರುದ್ವಾರಗಳಿಗೆ ಪ್ರತ್ಯೇಕ ರಾಜ್ಯವನ್ನು ರಚಿಸಬೇಕಾಗುತ್ತದೆ. ಒಂದು ಧರ್ಮಕ್ಕಾಗಿ ಪ್ರತ್ಯೇಕ ರಾಜ್ಯವನ್ನು ರಚಿಸುವಂತೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಪೀಠ ತಿಳಿಸಿದೆ.

ತಿರುಪತಿ ದೇಗುಲವು ಹಿಂದೂಗಳ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದು. ಪ್ರಸಾದದಲ್ಲಿ ಕಲಬೆರಕೆ ಮಾಡುವುದು ಭಕ್ತರ ಭಾವನೆಗಳಿಗೆ ಘಾಸಿ ಉಂಟು ಮಾಡುತ್ತದೆ. ಅಲ್ಲದೆ ದೇಗುಲದ ಘನತೆಗೂ ಧಕ್ಕೆ ತರುತ್ತದೆ. ಸಾಂಪ್ರದಾಯಿಕ ವಿಚಾರಗಳಲ್ಲಿ ರಾಜಕೀಯ ಮತ್ತು ಭ್ರಷ್ಟಾಚಾರ ನುಸುಳುವುದನ್ನು ತಡೆಯಲು ಮತ್ತು ಭಕ್ತರ ಹಿತದೃಷ್ಟಿಯಿಂದ ಈ ಅರ್ಜಿಯನ್ನು ಸಲ್ಲಿಸಿದ್ದೇವೆ' ಎಂದು ಅರ್ಜಿದಾರರು ತಿಳಿಸಿದ್ದಾರೆ.

ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರ ಅವಧಿಯಲ್ಲಿ ಲಾಡು ತಯಾರಿಕೆಗೆ ಪ್ರಾಣಿಗಳ ಕೊಬ್ಬನ್ನು ಬಳಸಲಾಗುತ್ತಿತ್ತು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಆರೋಪಿಸಿದ್ದರು. ಈ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಅ.4ರಂದು ಸ್ವತಂತ್ರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.

# ಚನ್ನಪಟ್ಟಣ ಮೈತ್ರಿ ಅಭ್ಯರ್ಥಿ ಪರ ಮಾಜಿ ಸಂಸದ ಸಿದ್ದೇಶ್ವರ ಪ್ರಚಾರ



ದಾವಣಗೆರೆ, ನ.8- ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಪ್ರಯುಕ್ತ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಮಾಜಿ ಸಂಸದ ಹಾಗೂ ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಅವರು ಇಂದು ಮತ ಯಾಚನೆ ಮಾಡಿದರು.

ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಹಾಗೂ ದುರಾಡಳಿತದಿಂದ ಜನರೂ ಸಾಕಷ್ಟು ನೊಂದಿದ್ದು, ಕಾಂಗ್ರೆಸ್ಸಿನ ಸರ್ಕಾರಕ್ಕೆ ಶಾಪವನ್ನು ಹಾಕುತ್ತಿದ್ದಾರೆ. ಇಂತಹ ಭ್ರಷ್ಟ ಮತ್ತು ಕೆಟ್ಟ ಆಡಳಿತ ಸರ್ಕಾರವನ್ನು ಎಂದೂ ನೋಡಿಲ್ಲವೆಂದರು ಹಾಗೂ ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸುವಂತೆ ಕ್ಷೇತ್ರದ ಜನರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಮುರುಗೇಶ್ ಆರ್. ನಿರಾಣಿ ಹಾಗೂ ಇತರರು ಉಪಸ್ಥಿತರಿದ್ದರು.

# 13ರಂದು ನಗರದಲ್ಲಿ ಆರೋಗ್ಯ ತಪಾಸಣೆ

ದಾವಣಗೆರೆ, ನ.8- ಭಾವಸಾರ ವಿಷನ್ ಇಂಡಿಯಾ (ದಾವಣಗೆರೆ) ಮತ್ತು ಬಾಲಾಜಿ ಎಜುಕೇಷನಲ್ ಅಂಡ್ ಸೋಶಿಯಲ್ ವೆಲ್ಫೇರ್ ಟ್ರಸ್ಟ್, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಮತ್ತು ದಾವಣಗೆರೆ ಹೈಟೆಕ್ ಡೈಗ್ನೋಸ್ಟಿಕ್ ಸೆಂಟರ್ ಇವರುಗಳ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ, ರಕ್ತ ಪರೀಕ್ಷೆ ಹಾಗೂ ಕಣ್ಣಿನ ಪರೀಕ್ಷೆಯನ್ನು ಇದೇ ದಿನಾಂಕ 13 ರಂದು ಬುಧುವಾರ ಬೆಳಿಗ್ಗೆ 9.30 ರಿಂದ ಮದ್ಯಾಹ್ನ 2 ರವರೆಗೆ ನಗರದ ಮಹಾರಾಜಪೇಟೆಯ ಶ್ರೀ ವಿಠ್ಠಲ ರುಕುಮಾಯಿ ಮಂದಿರದಲ್ಲಿ ನಡೆಸಲಾಗುವುದು ಎಂದು ಶ್ರೀಮತಿ ಸರಳ ಅಮಟೆ (94483 64830) ಹಾಗೂ ರಮೇಶಬಾಬು ಗುಜ್ಜರ್ (99456 59498) ತಿಳಿಸಿದ್ದಾರೆ.

# ನೇತ್ರದಾನ ಮಾಡಿ ಅಂಧರ ಬಾಳಿಗೆ ಬೆಳಕಾಗಿ

## ಹರಪನಹಳ್ಳಿಯಲ್ಲಿ ನೇತ್ರ ತಪಾಸಣಾ ಶಿಬಿರದಲ್ಲಿ ಪಿ.ಜಿ. ಮಹೇಶ್ವರಪ್ಪ



ಹರಪನಹಳ್ಳಿ,ನ.8- ಅಂಗಾಂಗಗಳಲ್ಲಿ ಕಣ್ಣು ಅತಿ ಮಹತ್ವದಾಗಿದೆ. ಕಣ್ಣಿನ ದೃಷ್ಟಿಯಿಂದಲೇ ನಮ್ಮ ದಿನನಿತ್ಯದ ಜೀವನ ಸಾಗಿಸಲು ಹಾಗೂ ನಮ್ಮ ಸುಂದರ ಜೀವನ ನೋಡಲು ಸಾಧ್ಯ ಎಂದು ನೇತ್ರ ಅಧಿಕಾರಿ ಪಿ.ಜಿ.ಮಹೇಶ್ವರಪ್ಪ ಹೇಳಿದರು.

ತಾಲ್ಲೂಕಿನ ಅರಸೀಕೆರೆ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಅಂಧತ್ವ ನಿವಾರಣಾ ಸಮಿತಿ ವಿಜಯನಗರ, ತಾಲ್ಲೂಕು ವೈದ್ಯಾಧಿಕಾರಿಗಳ ಕಚೇರಿ ಮತ್ತು ಶಂಕರ್ ಕಣ್ಣಿನ ಆಸ್ಪತ್ರೆ ಶಿವಮೊಗ್ಗ ಇವರ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಉಚಿತ ಕಣ್ಣಿನ ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ನೇತ್ರದಾನ ಮಹಾದಾನ' ಆದ್ದರಿಂದ ನಾವು ಸತ್ತ ನಂತರ ಈ ಸುಂದರ ಕಣ್ಣುಗಳು ಮಣ್ಣಿನಲ್ಲಿ ಮಣ್ಣಾಗದೇ ನೇತ್ರದಾನ ಮಾಡುವುದರ ಮೂಲಕ ಅಂಧರ ಬಾಳಿನಲ್ಲಿ ಆಶಾಕಿರಣ ಬೆಳಕಾಗೋಣ. ಎಲ್ಲರೂ ನೇತ್ರದಾನ ಮಾಡೋಣ ಎಂದ ಅವರು ಹೇಳಿದರು.

ಶಿವಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ ಡಾ.ರೂಪ, ಡಾ.ನಿಖಿಲ, ನೇತ್ರಾ ಸಹಾಯಕ ಮಹೇಶ್ವರಪ್ಪ, ಬಾಲಚಂದ್ರ, ಅನಿಲ್ ಕುಮಾರ್, ರೇಖಾ, ಸಿಂಧು ಪಾಟೀಲ್, ಶಿವಕುಮಾರ್ ಮತ್ತು ಇತರರು ಭಾಗವಹಿಸಿದ್ದರು.

# ವಕ್ಫ್ ಭೂ ಬಿಟ್ಟಿ ಕಾಂಗ್ರೆಸ್

**(1ನೇ ಪುಟದಿಂದ)** ಅಲ್ಪಸಂಖ್ಯಾತರ ಅರ್ಥಾತ್ ಮುಸಲ್ಮಾನರ ತುಷ್ಟೀಕರಣವೇ ಕಾಂಗ್ರೆಸ್ ಧ್ಯೇಯವನ್ನಾಗಿ ಮಾಡಿಕೊಂಡಿದೆ ಎಂದು ತೀಕ್ಷ್ಣವಾಗಿ ಟೀಕಿಸಿದರು.

ಸಿದ್ದರಾಮಯ್ಯ ಆಡಳಿತದ ಮೊದಲ ಅವಧಿಯಲ್ಲಿ (2013-18) ನಿರ್ಬಂಧಿತ ಪಿಎಫ್‌ಐ, ಎಸ್‌ಡಿಪಿಐ, ಕೆಎಫ್‌ಡಿ ಪೂರ್ವಾವತಾರವಾದ ಸಿಮಿ ಸಂಘಟನೆಯ ಮೇಲಿದ್ದ 175 ಮೊಕದ್ದಮೆಗಳನ್ನು ವಾಪಸ್ ಪಡೆದರು, ಇದೀಗ ಎರಡನೇ ಬಾರಿಗೆ ಮುಖ್ಯಮಂತ್ರಿ ಆದ ಮೇಲೆ ಹಿಂದೂ ಸಂಘಟನೆಗಳು, ಮಂದಿರಗಳ ಮೇಲೆ ಅನೇಕ ಬಾರಿ ದಾಳಿ ಮಾಡಿದವರ ಮೇಲಿನ ಕೇಸ್‌ಗಳನ್ನು ವಾಪಸ್ ಪಡೆದರು.

ಆದರೂ ಕಾಂಗ್ರೆಸ್ಸಿಗರಿಗೆ ಏನೂ ಅನಿಸುತ್ತಿಲ್ಲ, ತುಷ್ಟೀಕರಣ ರಾಜಕಾರಣದಿಂದ ಚುನಾವಣೆ ಗೆಲ್ಲಲು ಹೊರಟಿದ್ದಾರೆ, ಇದು ಕಾಂಗ್ರೆಸ್‌ನ ತುಷ್ಟೀಕರಣದ ಪರಾಕಾಷ್ಠೆ, ಈ ಬಾರಿ ಕಾಂಗ್ರೆಸ್‌ಗೆ ಶಾಕ್ ನೀಡಿದರೆ, ಅನ್ಯಾಯಕ್ಕೊಳಗಾದ ಹಿಂದೂಗಳೂ ಜಾಗೃತರಾಗಿದ್ದಾರೆ ಎಂಬ ಸಂದೇಶ ಸಿಗಲಿದ್ದು, ಆ ಪಕ್ಷವನ್ನು ಮತದಾರರು ಸಂಪೂರ್ಣವಾಗಿ ತಿರಸ್ಕರಿಸಬೇಕು ಎಂದರು.

ಬಿಜೆಪಿಯವರನ್ನು ಟೀಕಿಸುವುದಕ್ಕಾಗಿ, ತಮ್ಮನ್ನು ಕೇಸಿನಲ್ಲಿ ಸಿಲುಕಿಸುತ್ತಿದ್ದಾರೆ ಎಂಬುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ, ಜನರಿಗೆ ಸುಳ್ಳು ಹೇಳುವುದರಲ್ಲಿ ಕಾಂಗ್ರೆಸ್ಸಿಗರು ನಿಸ್ಸೀಮರು ಎಂಬುದು ಇದರಿಂದ ಅರ್ಥವಾಗುತ್ತದೆ.

ರಾಜ್ಯಪಾಲರು ಸಂಪೂರ್ಣ ವಿವೇಚನೆ ಬಳಸಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದನ್ನು ಪ್ರಶ್ನಿಸಿ, ಕೋರ್ಟ್ ಮೆಟ್ಟಿಲೇರಿದ ಮಿಸ್ಟರ್ ಸಿದ್ದರಾಮಯ್ಯ ವಿರುದ್ಧ ನ್ಯಾಯಾಲಯವೇ ತೀರ್ಪು ನೀಡಿದೆ, ನ್ಯಾಯಾಲಯ, ನ್ಯಾಯಾಂಗ ವ್ಯವಸ್ಥೆ ಬಗ್ಗೆ ಆ ಪಕ್ಷಕ್ಕೆ ಗೌರವವಿಲ್ಲ. ಸಂವಿಧಾನ ಪುಸ್ತಕ ಎಂಬುದಾಗಿ ತೋರಿಸಿ, ಖಾಲಿ ಹಾಳೆಯ ಪುಸ್ತಕದ ಪ್ರತಿಗಳನ್ನು ಕಾಂಗ್ರೆಸ್ಸಿಗರು ಹಂಚಿದ್ದಾರೆ ಎಂದರು.

# ನಗರದಲ್ಲಿ ಇಂದು ಸಭೆ

ಶ್ರೀ ಬೀರಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಕನಕದಾಸರ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯನ್ನು ಪಾಲಿಕೆ ಸದಸ್ಯ ಜೆ.ಎನ್ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ಮಾಜಿ ಉಪಾಧ್ಯಕ್ಷ ಆಲೇಕಲ್ ಎಸ್. ಟಿ ಅರವಿಂದ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



# ಜಗಳೂರು : 5 ಕೋಟಿ ರೂ. ಅನುದಾನ

**(1ನೇ ಪುಟದಿಂದ)** ಪಪಂ ಸದಸ್ಯರಾದ ಆರ್. ತಿಪ್ಪೇಸ್ವಾಮಿ, ಶಕೀಲ್ ಅಹಮ್ಮದ್, ಪಾಪಲಿಂಗಪ್ಪ, ರಮೇಶ್ ರೆಡ್ಡಿ, ಮಹಮ್ಮದ್ ಅಲಿ, ಮಂಜುನಾಥ್, ದೇವರಾಜ್, ನಾಮನಿರ್ದೇಶನ ಸದಸ್ಯರಾದ ಕುರಿ ಜಯ್ಯಣ್ಣ, ಶಾಂತಪ್ಪ, ತಾನಾಜಿ ಗೋಸಾಯಿ, ಪ.ಪಂ.ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಮುಂತಾದವರು ಇದ್ದರು.

# ಅಭಿನವ ಕುಮಾರ ಚನ್ನಬಸವ ಸ್ವಾಮಿಗಳ ನಿಧನಕ್ಕೆ ವೀರಶೈವ ಮಹಾಸಭಾ ಸಂತಾಪ

ಬೆಂಗಳೂರು, ನ.8- ಜಮಖಂಡಿ ಓಲೇಮಠದ ಶ್ರೀ ಡಾ. ಅಭಿನವ ಕುಮಾರ ಸ್ವಾಮಿಗಳವರು ಇಂದು ಲಿಂಗೈಕ್ಯರಾಗಿದ್ದು, ಅಖಿಲ ಭಾರತ ವೀರಶೈವ ಮಹಾಸಭಾ ಗೌರವಾಧ್ಯಕ್ಷ ಡಾ. ಭೀಮಣ್ಣ ಖಂಡ್ರೆ, ಮಹಾಸಭೆಯ ಅಧ್ಯಕ್ಷರು ಹಾಗೂ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ಸಚಿವ ಈಶ್ವರ ಬಿ.ಖಂಡ್ರೆ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅಪರೂಪದ ವಾಗ್ಮಿಗಳು, ಪಂಡಿತರೂ ಆಗಿದ್ದ ಪೂಜ್ಯರು, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಗ್ಗೆಯ ಮಾಯಿದೇವರ ಶಿವಾನುಭವ ಸೂತ್ರ ಒಂದು ಅಧ್ಯಯನ ಎಂಬ ಮಹಾಪ್ರಬಂಧ ಬರೆದು ಪಿಎಚ್.ಡಿ ಪದವಿ ಪಡೆದಿದ್ದರು. ಇತ್ತೀಚೆಗೆ ಬಸವಣ್ಣನವರನ್ನು ಕುರಿತು ದ್ವಿಪದಿ ಮಹಾಕಾವ್ಯ ರಚಿಸಿದ್ದಾರೆ. ಪೂಜ್ಯರ ಅಗಲುವಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಎಂ.ರೇಣುಕ ಪ್ರಸನ್ನ ತಿಳಿಸಿದ್ದಾರೆ.



# ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ

ದಾವಣಗೆರೆ, ನ.8- ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಶಾಲಾ – ಕಾಲೇಜಿನ ಮಕ್ಕಳು ಮತ್ತು ಸಿಬ್ಬಂದಿ ವರ್ಗದವರು 69 ನೇ ಕರ್ನಾಟಕ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದರು.

ಹಿರಿಯ ಶಿಕ್ಷಕಿ ಆರ್. ವಸಂತ ಅವರು ಧ್ವಜಾರೋಹಣ ನೆರವೇರಿಸಿದರು. ಸಂಗೀತ ಶಿಕ್ಷಕರಾದ ಮಂಗಳ ಮತ್ತು ರುದ್ರಾಕ್ಷಿಬಾಯಿ ನೇತೃತ್ವದಲ್ಲಿ ಕನ್ನಡ ಭಾವಗೀತೆಗಳನ್ನು ಮಕ್ಕಳು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು.

ಕರ್ನಾಟಕ ಏಕೀಕರಣದ ಬಗ್ಗೆ, ಕನ್ನಡ ನಾಡು, ಶ್ರೀಮಂತಿಕೆ, ಭಾಷಾ ಪ್ರೌಢಿಮೆ, ಸುಂದರ ಲಿಪಿಯ ಬಗ್ಗೆ ಮಕ್ಕಳು ಭಾಷಣ ಮಾಡಿದರು. ಜಾನಪದ ಪ್ರಕಾರಗಳಾದ ಡೊಳ್ಳು, ಕಂಸಾಳೆ, ನಂದಿಕೋಲುಗಳ ಪ್ರಾತ್ಯಕ್ಷಿಕೆ ನೀಡಿ ಈ ಕಲೆಗಳ ಭವ್ಯತೆ, ಆಚರಣೆ, ವಸ್ತ್ರ ವಿನ್ಯಾಸದ ಬಗ್ಗೆ ಮಾಹಿತಿ ನೀಡಿದರು.

ಶಿಕ್ಷಕಿಯರಾದ ಉಷಾರಾಣಿ ಎಸ್.ಎಲ್., ವಿಜಯಶ್ರೀ ಬಿ. ಸಿ., ವಸಂತ ಆರ್. ರವರು ಬರೆದಿದ್ದ ಕವನಗಳನ್ನು ಮಕ್ಕಳು ವಾಚಿಸಿದರು. ಆಕರ್ಷಕ ರಂಗೋಲಿ ಚಿತ್ತಾರದ ನಡುವೆ ಕರ್ನಾಟಕ ಮಾತೆಯ ಭಾವ ಚಿತ್ರ ಮತ್ತು ಕರ್ನಾಟಕದ ಭೂಪಟ ಸುಂದರವಾಗಿ ಕಂಗೊಳಿಸುತ್ತಿತ್ತು.

ವೇದಿಕೆಯ ಮೇಲೆ ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ಹೇಮಂತ್, ನಿರ್ದೇಶಕ ಡಾ॥ ಜಯಂತ್ ಡಿ. ಎಸ್., ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ರೇಖಾರಾಣಿ ಕೆ. ಎಸ್., ಸಿ.ಬಿ.ಎಸ್.ಇ. ಶಾಲೆಯ ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್ ಇವರು ಉಪಸ್ಥಿತರಿದ್ದರು.

ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಆಶಾ ಎಸ್. ಕಾರ್ಯಕ್ರಮ ನಿರೂಪಿಸಿದರು.

# ಮಹಾನಗರ ಪಾಲಿಕೆಯಿಂದ 13 ರಿಂದ ಇ-ಆಸ್ತಿ ಆಂದೋಲನ

**(1ನೇ ಪುಟದಿಂದ)** ಪಡೆದ ದಾಖಲೆ, 2001-02ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಆಸ್ತಿ ತೆರಿಗೆ ಪಾವತಿಸಿದ ದಾಖಲೆಗಳು ಹಾಗೂ ನೀರಿನ ಶುಲ್ಕ, ಒಳಚರಂಡಿ, ಘನತ್ಯಾಜ್ಯ ಸೇವಾ ಶುಲ್ಕ ಪಾವತಿಸಿದ ದಾಖಲೆಗಳು.

**ವಲಯ ಕಚೇರಿಗಳ ವಿವರ ಹಾಗೂ ಸಂಪರ್ಕಿಸಬೇಕಾದ ವಿವರ :** ವಲಯ ಕಛೇರಿ-1, ರಾಜೀವ್ ಗಾಂಧಿ ಬಡಾವಣೆ ದಾವಣಗೆರೆಯ ವಲಯದ ಆಯುಕ್ತರಾದ ನಾಗರತ್ನಮ್ಮ ಮೊ.ಸಂ:7349048992, ಸಂಪರ್ಕಿಸಬೇಕಾದ ಅಧಿಕಾರಿ ಕಚೇರಿ ವ್ಯವಸ್ಥಾಪಕರಾದ ಗೋವಿಂದ ನಾಯ್ಕ ಮೊ.ಸಂ:9611105139, ವಲಯ ಕಚೇರಿ-2, ಟಿವಿ ಸ್ಟೇಷನ್ ಮುಂಭಾಗ, ಲೋಕಿಕೆರೆ ರಸ್ತೆ ದಾವಣಗೆರೆಯ ವಲಯ ಆಯುಕ್ತರಾದ ಇಸ್ಮಾಯಿಲ್ ಮೊ.ಸಂ:9844367555, ಸಂಪರ್ಕಿಸಬೇಕಾದ ಅಧಿಕಾರಿ ಕಮಿಟಿ ಸೆಕ್ರಟರಿ ಸರಳಾ ಮೊ.ಸಂ: 9901124232, ವಲಯ ಕಚೇರಿ-3, ಆಶ್ರಯ ಆಸ್ಪತ್ರೆ ಪಕ್ಕ ಎಂ.ಸಿ.ಸಿ ಎ. ಬ್ಲಾಕ್ ದಾವಣಗೆರೆ ವಲಯ ಆಯುಕ್ತರಾದ ಈರಮ್ಮ ಮೊ.ಸಂ: 9901768584, ಸಂಪರ್ಕಿಸಬೇಕಾದ ಕಚೇರಿ ವ್ಯವಸ್ಥಾಪಕರಾದ ತ್ರಿನೇತ್ರ ಮೊ.ಸಂ: 8971454920 ನ್ನು ಸಂಪರ್ಕಿಸಲು ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

# ಅಮೇರಿಕಾ: ವಲಸಿಗರಿಗೆ ಪೌರತ್ವ ನೀಡುವ ನೀತಿ ರದ್ದು

**(1ನೇ ಪುಟದಿಂದ)** ತಿಂಗಳಲ್ಲಿ ತಡೆ ನೀಡಿದ್ದರು.

ಗುರುವಾರ ಅಂತಿಮ ತೀರ್ಪು ನೀಡಿರುವ ಬಾರ್ಕರ್, ಈ ನೀತಿಯನ್ನು ರದ್ದುಗೊಳಿಸುವುದಾಗಿ ಪ್ರಕಟಿಸಿದರು. 'ಈ ಕಾರ್ಯಕ್ರಮ ಅನುಷ್ಠಾನಗೊಳಿಸುವ ಮೂಲಕ ಬೈಡನ್ ಆಡಳಿತವು ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿದೆ' ಎಂದು ತೀರ್ಪಿನಲ್ಲಿ ತಿಳಿಸಿದರು.

'ಕುಟುಂಬಗಳನ್ನು ಒಟ್ಟಿಗೆ ಇಟ್ಟುಕೊಳ್ಳುವುದು' ಎಂಬ ಘೋಷವಾಕ್ಯದೊಂದಿಗೆ ಬೈಡನ್ ಆಡಳಿತ ಜಾರಿಗೊಳಿಸಿರುವ ಈ ಅಲ್ಪಾವಧಿ ನೀತಿಯು, ಡೊನಾಲ್ಡ್ ಟ್ರಂಪ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ಮುಂದುವರೆಯುವುದು ಅನುಮಾನ ಎನಿಸಿತ್ತು. ಇದೀಗ ಅದಕ್ಕೂ ಮೊದಲೇ ರದ್ದಾಗಿರುವುದರಿಂದ ಸಾವಿರಾರು ವಲಸಿಗ ಕುಟುಂಬಗಳ ಮೇಲೆ ಅನಿಶ್ಚಿತತೆಯ ಕಾರ್ಮೋಡ ಕವಿದಿದೆ.

ಬೈಡನ್ ಜಾರಿಗೆ ತಂದಿರುವ ನೀತಿಯು ದೇಶದ ಆರ್ಥಿಕ ಹೊರೆಯನ್ನು ಹೆಚ್ಚಿಸಿದೆಯಲ್ಲದೆ, ಇನ್ನಷ್ಟು ವಲಸಿಗರನ್ನು ಅಮೆರಿಕದತ್ತ ಸೆಳೆಯಬಹುದು ಎಂದು ರಿಪಬ್ಲಿಕನ್ ಪಕ್ಷದವರು ಟೀಕಿಸಿದ್ದರು.

# ಕುಂಬಳೂರು ಗ್ರಾಮದ ಎಸ್.ಜಿ. ಪಾರ್ವತಮ್ಮ ನಿಧನ



ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ವಾಸಿ
ದಿ. ಶಂಕರಾನಂದಪ್ಪ
(ಆಂಜನೇಯ ರೈಸ್ ಮಿಲ್ ಶಂಕ್ರಣ್ಣ) ಅವರ ಧರ್ಮಪತ್ನಿ

**ಎಸ್.ಜಿ. ಪಾರ್ವತಮ್ಮ (78ವರ್ಷ)**

ಇವರು ದಿನಾಂಕ 08-11-2024ರ ಶುಕ್ರವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09-11-2024ರ ಶನಿವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗ್ರಾಮವಾದ ಕುಂಬಳೂರಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
**ಮೊ. : 96635 78843**

# ತಂತ್ರಜ್ಞಾನದ ಧಾವಂತದಲ್ಲಿ ಕನ್ನಡದ ನಿರ್ಲಕ್ಷ್ಯ

**(1ನೇ ಪುಟದಿಂದ)** ಧರ್ಮವನ್ನು ರಕ್ಷಿಸಿದರೆ ನಮ್ಮನ್ನು ಧರ್ಮ ರಕ್ಷಿಸುತ್ತದೆ. ದ್ವೇಷಕ್ಕಾಗಿ ಧರ್ಮವನ್ನು ಬಳಸಿಕೊಳ್ಳುತ್ತಿರುವುದು ವಿಷಾದನೀಯ ಎಂದರು.

ಮಂಡ್ಯದ ಡಾ. ಪ್ರದೀಪ್‌ಕುಮಾರ್ ಹೆಬ್ರಿ ಮಾತನಾಡಿ, ಡಿ.20ರಂದು ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಿರಿಗೆರೆಯಲ್ಲಿ ಇಂದು ಕೋಟಿ ಕಂಠ ಗಾಯನ ಮಾಡಿದ 4ಸಾವಿರ ವಿದ್ಯಾರ್ಥಿಗಳ ಗಾಯನ ಮೊಳಗಬೇಕು. ಇಂದಿನ ವಿದ್ಯಾರ್ಥಿಗಳಿಗೆ ಸಾಧನೆ ಆಕಾಶದಷ್ಟು, ಆಸೆ ಆಕಾಶದಾಚೆ ಇರಬೇಕು. ನೀವೆಲ್ಲಾ ಶ್ರೀಮಠದ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ವಿದ್ಯಾರ್ಥಿಗಳಾಗಬೇಕು ಎಂದರು.

ಉಡುಪಿ ಕಸಾಪ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಅವರು 'ಕನ್ನಡ ಸಾಹಿತ್ಯದಲ್ಲಿ ಭಕ್ತಿ' ವಿಷಯವಾಗಿ ಮಾತನಾಡಿ, ಹಿಂದೂ ಧರ್ಮದಲ್ಲಿ ಭಕ್ತಿಗೆ ವಿಶೇಷ ಸ್ಥಾನ ಇದೆ. ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯ ಅಪಾರ. ದಾಸ ಸಾಹಿತ್ಯಕ್ಕೆ ಪ್ರೇರಣೆಯೇ ವಚನಗಳು. ಸಂಗೀತ ಮತ್ತು ಸಾಹಿತ್ಯದ ಸಾಮರಸ್ಯವೇ ಕನ್ನಡ ಸಾಹಿತ್ಯ. ಎಲ್ಲಾ ವಿದ್ಯಾರ್ಥಿಗಳು ಕನ್ನಡ ಬೆಳೆಸಿ, ಕನ್ನಡ ಮಾತನಾಡಿ ಕನ್ನಡದ ಕಾರ್ಯಕ್ರಮಗಳಿಗೆ ಮೊದಲ ಆದ್ಯತೆ ನೀಡಿ ಎಂದರು.

ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷರಾದ ಬಿ.ವಾಮದೇವಪ್ಪ, ಕೆ.ಎಂ.ಶಿವಸ್ವಾಮಿ, ಸಂಸ್ಥೆಯ ಆಡಳಿತಾಧಿಕಾರಿ ಎಚ್.ವಿ. ವಾಮದೇವಪ್ಪ, ವಿಶೇಷಾಧಿಕಾರಿ ವೀರಣ್ಣ ಎಸ್. ಜತ್ತಿ, ವಿದ್ಯಾ ಸಂಸ್ಥೆಯ ಕನ್ನಡ ಶಿಕ್ಷಕರು, ಉಪನ್ಯಾಸಕರು, ಶಾಲಾ-ಕಾಲೇಜುಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಇದ್ದರು. ನಾಗರಾಜ ಸಿರಿಗೆರೆ ನಿರೂಪಿಸಿದರು. ಕೆ.ಇ. ಬಸವರಾಜಪ್ಪ ಸ್ವಾಗತಿಸಿ ದರು.

ಬೆಳಗ್ಗೆ ವಿವಿಧ ಜನಪದ ಕಲಾ ತಂಡಗಳೊಂದಿಗೆ ಭುವನೇಶ್ವರಿ ದೇವಿ ಪ್ರತಿಮೆ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ಜರುಗಿತು. ವಿದ್ಯಾರ್ಥಿಗಳು ಕವಿಗಳ, ಸಾಹಿತಿಗಳ ಹಾಗೂ ವಚನಕಾರರ ವೇಷ ಭೂಷಣಗಳನ್ನು ಧರಿಸಿ ಮೆರವಣಿಗೆ ಯಲ್ಲಿ ಗಮನ ಸೆಳೆದರು. ಮೆರವಣಿಗೆಯಲ್ಲಿ ಕನ್ನಡ ಘೋಷಣೆಗಳು, ಕನ್ನಡ ಬಾವುಟಗಳು ರಾರಾಜಿಸಿದವು. ನಂತರ ಕನ್ನಡ ಧ್ವಜಾರೋಹಣ ಮತ್ತು 4 ಸಾವಿರ ವಿದ್ಯಾರ್ಥಿಗಳಿಂದ ಕನ್ನಡ ಗೀತೆಗಳ ಗಾಯನ ನಡೆಯಿತು.

# ನಾಡಿದ್ದು ಕುರಿ-ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ನ.8- ಇಲ್ಲಿನ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶು ಸಂಗೋಪನಾ ಚಟುವಟಿಕೆಗಳ ತರಬೇತಿ ಆಯೋಜಿಸಲಾಗಿದೆ.

ಇದೇ ದಿನಾಂಕ 11 ಮತ್ತು 12ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ ಇದೇ ದಿನಾಂಕ 15 ಮತ್ತು 16ರಂದು ಕೋಳಿ ಸಾಕಾಣಿಕೆ ತರಬೇತಿ, ಇದೇ ದಿನಾಂಕ 29, 30ರಂದು ಆಧುನಿಕ ಹೈನುಗಾರಿಕೆ ತರಬೇತಿ ನಡೆಯಲಿದೆ. ಮಾಹಿತಿಗಾಗಿ 08192-233787 ಸಂಪರ್ಕಿಸಿ.

# ಒಳ್ಳೆಯ ಮಾತುಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು



**ಸಾಣೇಹಳ್ಳಿಯಲ್ಲಿನ ರಾಷ್ಟ್ರೀಯ ನಾಟಕೋತ್ಸವದ ಚಿಂತನಾ ಗೋಷ್ಠಿಯಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ**

ಸಾಣೇಹಳ್ಳಿ, ನ.8- ಇಲ್ಲಿನ ಶ್ರೀ ಶಿವಕುಮಾರ ಕಲಾಸಂಘ ರಾಷ್ಟ್ರೀಯ ನಾಟಕೋತ್ಸವದ ನಿಮಿತ್ತ ಶ್ರೀ ಶಿವಕುಮಾರ ರಂಗಮಂದಿರದಲ್ಲಿ ಆಯೋಜಿಸಿದ್ದ ಚಿಂತನಾ ಗೋಷ್ಠಿಯ ಸಾನ್ನಿಧ್ಯ ವಹಿಸಿದ್ದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕೇಳಿದ ಒಳ್ಳೆಯ ಮಾತುಗಳನ್ನು ಆಗಿಂದಾಗಲೇ ಬದುಕಿ ನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಶ್ರವಣ, ಮನನ ಮತ್ತು ನಿಧಿದ್ಯಾಸನ ಬದುಕಿನ ಪ್ರಗತಿಗೆ ಪೂರಕವಾದವು. ನಡೆ-ನುಡಿ ಸಿದ್ಧಾಂತ ಅಂದರೆ ನುಡಿದಂತೆ ನಡೆಯುವುದು ಮತ್ತು ನಡೆದಂತೆ ನುಡಿಯುವುದು. ಇದು ಅತ್ಯಂತ ಸರಳ. ಆದರೆ ಇದನ್ನು ಬಾಲ್ಯದಿಂದಲೇ ರೂಢಿಸಿಕೊಳ್ಳಬೇಕು.

ಚೆನ್ನಬಸವಣ್ಣನವರು ತಿಳಿಯುವುದು ಜ್ಞಾನ, ಅದರಂತೆ ನಡೆದುಕೊಳ್ಳುವುದೇ ಕ್ರಿಯೆ ಎಂದರು. ನುಡಿದಂತೆ ನಡೆದರೆ ಸಮಾಜದಲ್ಲಿ ಗೌರವ ಸಿಗುವುದಲ್ಲದೆ ಬದುಕು ಮೌಲ್ಯಯುತವಾಗುವುದು. ಶರಣರು ದೇವರಿಗೇ ಸವಾಲು ಹಾಕಿ ಅದರಂತೆ ಬದುಕಿ ತೋರಿಸಿದರು. ಇಂಥ ಸಂಕಲ್ಪ ನಮ್ಮವೂ ಆಗಬೇಕು. ಸಂಕಲ್ಪ ಮಾಡುವುದು ದೊಡ್ಡದಲ್ಲ; ಅದರಂತೆ ನಡೆದುಕೊಳ್ಳುವುದೇ ದೊಡ್ಡದು. ಚಂಚಲ ಮನಸ್ಸನ್ನು ಹತೋಟಿಯಲ್ಲಿಡುವವನೇ ಮಹಾತ್ಮನಾಗುವನು. ಮಹಾತ್ಮರೆಲ್ಲರೂ ನುಡಿದಂತೆ ನಡೆದುಕೊಂಡವರು. ಅವರಿಂದ ನಾವೂ ಸ್ಫೂರ್ತಿಯನ್ನು ಪಡೆದು ಅವರಂತೆ ಬದುಕುವ ಪ್ರಯತ್ನ ಮಾಡುವುದೇ ನಿಜವಾದ ಶಿಕ್ಷಣ. ಮರುಗುವುದೇ ಧರ್ಮ; ಕರುಬುವುದಲ್ಲ. ಯಕಃಶ್ಚಿತ್ ಪ್ರಾಣಿಗಳೇ ತಮ್ಮ ಧರ್ಮವನ್ನು ಬಿಡದಿರುವಾಗ ಮಾನವರಾದ ನಾವು ಮಾನವೀಯತೆಯನ್ನು ಬಿಡುವುದು ಸರಿಯಲ್ಲ. ವಿದ್ಯಾವಂತರಲ್ಲೇ ನಡೆ-ನುಡಿಗಳಲ್ಲಿನ ಅಂತರ ಹೆಚ್ಚುತ್ತಿವೆ. ಹೀಗಾಗಿ ಅವರ ಬಗೆಗೆ ಜನರಲ್ಲಿ ಒಲವು, ಪ್ರೀತಿ ಉಳಿಯುತ್ತಿಲ್ಲ. ಬುದ್ಧ, ಬಸವ, ಗಾಂಧಿ ಮೊದಲಾದ ಮಹಾತ್ಮರು ತಮ್ಮ ದೋಷಗಳನ್ನು ಸರಿಪಡಿಸಿಕೊಳ್ಳುತ್ತಾ ಹೋದರು. ಅವರಂತೆ ನಾವೂ ಮಹಾತ್ಮರಾಗಲು ಸಾಧ್ಯ ಎಂದು ಆಶಿಸಿದರು.

'ನಡೆ-ನುಡಿ ಸಿದ್ಧಾಂತ' ಕುರಿತಂತೆ ದಾವಣಗೆರೆಯ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಪೂಜ್ಯರು ಸದಾ ಕರುಣೆ, ಪ್ರೀತಿ, ಮೈತ್ರಿಯನ್ನು ತೋರಿಸಿದ್ದಾರೆ. ಎಲ್ಲ ಕಡೆಯಲ್ಲೂ ಬಾಯಿಮುಚ್ಚಿಸುವ ಕಾಲಘಟ್ಟದಲ್ಲಿ ಮಾತನಾಡಲು ಅವಕಾಶ ಮಾಡಿಕೊಡುತ್ತಿದ್ದಾರೆ. ಹೊಲಿಕೆ, ಹೊಟ್ಟೆಕಿಚ್ಚಿನಲ್ಲಿ ಜಗತ್ತು ಬಳಲುತ್ತಿದೆ. ಉಪಯೋಗಿಸು ಅಥವ ಕಳೆದು ಕೋ ಎನ್ನುವ ಮಾತು ಆಂಗ್ಲಭಾಷೆಯಲ್ಲಿ ಚಾಲ್ತಿಯಿದೆ. 20 ವರ್ಷ ಚೆನ್ನಾಗಿ ಅಧ್ಯಯನ ಮಾಡಿ ಸಂಸ್ಕಾರ ಬೆಳೆಸಿಕೊಂಡರೆ ಮುಂದಿನ 80 ವರ್ಷ ನೆಮ್ಮದಿಯಿಂದ ಬಾಳಬಹುದು. ಬದುಕಿಗೆ ಬಹಳ ಮುಖ್ಯವಾಗಿ ಬೇಕಾಗುವುದು ನಿರಹಂಕಾರ, ನಿಷ್ಕಲ್ಮಷ ಪ್ರೇಮ, ನಿರ್ಭಯ. ಯಾರ ಬಗ್ಗೆಯಾದರೂ ಏನಾದರೂ ಮಾತನಾಡುವ ಮೊದಲು ಅದು ಸತ್ಯವೇ, ಅದರಿಂದ ನನಗೆ, ಸಮಾಜಕ್ಕೆ ಉಪಯೋಗವಾ ಗುತ್ತದೆಯೇ ಎನ್ನುವುದನ್ನು ಯೋಚಿಸಬೇಕು. ನುಡಿದಂತೆ ನಡೆದವರು ಮಾತ್ರ ಮಹಾತ್ಮರಾಗಲು ಸಾಧ್ಯ. ಸಮಾಜದ ಮೌಲ್ಯಗಳಿಗೆ ನಾವು ಬದ್ಧರಾಗಿರಬೇಕು. ನಮಗೆ ನಾವು ಮೋಸ ಮಾಡಿಕೊಂಡರೆ ಮಹಾತ್ಮರಾಗಲು ಸಾಧ್ಯವಿಲ್ಲ. ಹಗುರಾದ ಮೈ, ಹಂಗಿಲ್ಲದ ಬದುಕು, ಹಗೆಯಿಲ್ಲದ ಮನಸ್ಸುಗಳು ಆದಯ ಮತ್ತು ಆರೋಗ್ಯಕ್ಕೆ ಮೂಲಸೆಲೆಗಳು. ನಾನು, ನನ್ನಿಂದಲೇ ಎನ್ನುವುದನ್ನು ಬಿಡಬೇಕು. ಹಸಿವು, ಸಾಲ, ಆರೋಗ್ಯ, ಸಂಬಂಧಗಳೇ ಬದುಕಿಗೆ ಸಮಸ್ಯೆಗಳನ್ನು ತಂದೊಡ್ಡುವವು. ಇವುಗಳ ಬಗ್ಗೆ ಸದಾ ಎಚ್ಚರದಿಂದ ಇರಬೇಕು. ಶರಣರು 'ನುಡಿಯಬಾರದು ಕೆಟ್ಟ ನುಡಿಗಳ, ನಡೆಯಬಾರದು. ಕೆಟ್ಟ ನಡೆಗಳನ್ನು' ಎಂದು ಹೇಳಿ ಅದರಂತೆ ನಡೆದರು. ಆದ್ದರಿಂದಲೇ ಅಲ್ಲಿ ಕಲ್ಯಾಣ ಸೃಷ್ಟಿಯಾಯಿತು. ನಮಗೆ ನಾವೇ ಶತ್ರುಗಳು ಮತ್ತು ಮಿತ್ರರು. ವಿನಮ್ರತೆ, ಪ್ರೀತಿಗೆ ಬಹಳ ದೊಡ್ಡ ಶಕ್ತಿಯಿದೆ. ಬ್ರೈನ್‌ಗೆ ಸುಳ್ಳು, ಸತ್ಯಗಳು ಗೊತ್ತಾಗುವುದಿಲ್ಲ. ಅದು ನಾವು ತರಬೇತಿಗೊಳಿಸಿದಂತೆ ಅದು ನಡೆದುಕೊಳ್ಳುತ್ತದೆ. ಆದರೆ ಹೃದಯಕ್ಕೆ ಸುಳ್ಳು, ಸತ್ಯದ ಅರಿವಾಗುತ್ತದೆ. ಹಾಗಾಗಿ ನಾವು ಹೃದಯದ ಮಾತನ್ನು ಕೇಳಬೇಕೇ ಹೊರತು; ಬುದ್ಧಿಯ ಮಾತನ್ನಲ್ಲ. ಜೀವನದಲ್ಲಿ ಏನನ್ನಾದರೂ ಸಾಧಿಸಲು ನಡೆ-ನುಡಿಯನ್ನು ಒಂದಾಗಿಸಿಕೊಳ್ಳಬೇಕು ಎಂದರು.

ಸಂಗೀತ ಶಿಕ್ಷಕ ಹೆಚ್. ಎಸ್. ನಾಗರಾಜ್ ಮತ್ತು ಕೆ. ಜ್ಯೋತಿ ಧ್ಯಾನ, ಮೌನ, ವಚನ ಪ್ರಾರ್ಥನೆ, ಶಿವಮಂತ್ರಲೇಖನ, ಶಿಕ್ಷಕಿ ದೀಪಾ ಕಾರ್ಯಕ್ರಮ ನಡೆಸಿಕೊಟ್ಟರು.

# ಕೌಶಲ್ಯಗಳಿಂದ ಆರ್ಥಿಕ ಸ್ಥಿತಿಗತಿ ಸುಧಾರಣೆ ಸಾಧ್ಯ

## ಡಿಆರ್‌ಡಿಒ ಇಂಡಸ್ಟ್ರಿ ಅಕಾಡೆಮಿ ನಿರ್ದೇಶಕ ಡಾ. ಸುಧೀರ್ ಕಾಮತ್



ದಾವಣಗೆರೆ, ನ.8- ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕಂಪನಿಗಳಲ್ಲಿ ಸೋಲು-ಗೆಲುವು ಸಹಜ, ಆದರೆ ಕೆಲಸದಲ್ಲಿನ ಕೌಶಲ್ಯ ಗಳಿಂದ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಬ ಹುದು ಎಂದು ಡಿಆರ್‌ಡಿಒ ಇಂಡಸ್ಟ್ರಿ ಅಕಾಡೆಮಿ ನಿರ್ದೇಶಕ ಡಾ. ಸುಧೀರ್ ಕಾಮತ್ ತಿಳಿಸಿದರು.

ನಗರದ ಜಿ.ಎಂ. ವಿಶ್ವವಿದ್ಯಾಲಯದಲ್ಲಿ 2024-25ನೇ ಸಾಲಿನ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಸ್ವಾಗತ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಬೆಂಗಳೂರಿನ ಐಬಿಎಂನ ಮಾಜಿ ನಾಯಕತ್ವ ತರಬೇತುದಾರ ಬರ್ಟ್ ಚೆರಿಯನ್ ಅವರು ಗಾಂಧೀಜಿಯವರ ಆದರ್ಶಗಳು ಹಾಗೂ ಹಲವಾರು ಕಥಾ ಪಾತ್ರಗಳನ್ನು ಪರಿಚಯಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಮಾರ್ಗದರ್ಶನ ನೀಡಿದರು.

ಆಡಳಿತ ಮಂಡಳಿ ಸದಸ್ಯ ಡಾ. ಕೆ. ದಿವ್ಯಾನಂದ ಮಾತನಾಡಿ, ಸಂಸ್ಥೆಯ ಬೆಳವಣಿಗೆಯ ಜೊತೆಗೆ ವಿದ್ಯಾರ್ಥಿಗಳಲ್ಲಿ ಸಂಸ್ಕಾರ ದೊರೆಯುವಂತಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿ.ಎಂ.ವಿವಿ ಕುಲಪತಿ ಜಿ.ಎಂ.ಲಿಂಗರಾಜು ಮಾತನಾಡಿ, ಪಿ.ಯು.ಸಿ. ಮುಗಿಸಿದ ವಿದ್ಯಾರ್ಥಿಗಳು ಪದವಿ ಪ್ರವೇಶ ಪಡೆದ ಮೇಲೆ ವಿದ್ಯಾಭ್ಯಾಸ, ಜೀವನ ಪಾಠ ಸಂಸ್ಕಾರ ಪಡೆದು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ತಿಳಿಸಿದರು. ಜಿ.ಎಂ. ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಎಸ್.ಆರ್.ಶಂಕಪಾಲ್, ಪ್ರಭಾರ ಉಪಕುಲಪತಿ ಡಾ. ಹೆಚ್.ಡಿ.ಮಹೇಶಪ್ಪ, ಕುಲಸಚಿವ ಡಾ.ಸುನೀಲ್ ಕುಮಾರ್ ಬಿ.ಎಸ್. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕರಾದ ಶೃತಿ ಆರ್. ಎನ್ ಮತ್ತು ವಸುಧ ಎಂ.ಎಂ.ಜೆ ಕಾರ್ಯಕ್ರಮ ನಿರೂಪಿಸಿದರು.

# ಕನ್ನಡ ಪರ ಕೆಲಸಗಳಿಗೆ ಸಂಘಟನೆಗಳು ಸದಾ ಸಿದ್ಧ: ಶಿವಕುಮಾರ್



ದಾವಣಗೆರೆ, ನ.8- ಕನ್ನಡ ಪರವಾದ ಕೆಲಸಗಳಿಗೆ ಕನ್ನಡ ಪರ ಸಂಘಟನೆಗಳು ಸದಾ ಸಿದ್ದವಾಗಿರುತ್ತವೆ ಎಂದು ಕನ್ನಡಮ ಪರ ಹೋರಾಟಗಾರ ಕೆ. ಜಿ. ಶಿವಕುಮಾರ್ ಹೇಳಿದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್‌ನ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಕನ್ನಡದ ಕೆಲಸಗಳು ನೂರಕ್ಕೆ ನೂರರಷ್ಟು ಆಗಬೇಕು. ಅಲ್ಲಿಯವರೆಗೆ ನಮಗೆ ತೃಪ್ತಿ ಇಲ್ಲ, ಕನ್ನಡಕ್ಕಾಗಿ ಹೋರಾಟಗಳು ಹಿಂದೆಯೂ ಇದ್ದವು, ಮುಂದೆಯೂ ಮುಂದುವರೆಯುತ್ತವೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ಶ್ರೀಮತಿ ಅನ್ನಪೂರ್ಣ ರವಿ ಮಾತನಾಡಿ, ಅನ್ಯಭಾಷಿಗರ ಜೊತೆಯೂ ಕನ್ನಡವನ್ನೇ ಮಾತನಾಡಿ, ನಮ್ಮ ಭಾಷೆಯನ್ನು ಅವರಿಗೂ ಕಲಿಸುವ ಕೆಲಸಗಳಾಗಬೇಕು ಎಂದರು.

ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ರಾಜಶೇಖರ್ ಗುಂಡಗಟ್ಟಿ ವಹಿಸಿದ್ದರು, ಅಣಬೇರು ತಾರೇಶ್ ಕೆ.ಪಿ. ಹಾಗೂ ಸುನೀತ ಪ್ರಕಾಶ್ ನಿರೂಪಿಸಿದರು. ವೀರೇಶ್ ಬಿ. ಎಮ್. ಜಿ. ವೀರಭದ್ರಪ್ಪ ತೆಲಿಗಿ, ಶಿವಯೋಗಿ ಹಿರೇಮಠ್, ಎಮ್. ಬಸವರಾಜ್, ಫಕ್ಕಿರೇಶ್ ಆದಾಪುರ, ಓಂಕಾರಯ್ಯ ತವನಿಧಿ, ಹಾಗೂ ಪರಿಷತ್ತಿನ ಪದಾಧಿಕಾರಿಗಳು ಭಾಗವಹಿಸಿದ್ದರು.

# ನಗರದಲ್ಲಿ ನಾಳೆ ಓಪನ್ ರ್‍ಯಾಪಿಡ್ ಚೆಸ್ ಪಂದ್ಯಾವಳಿ

ದಾವಣಗೆರೆ, ನ. 8 - ನಗರದ ಗುರು ಭವನದಲ್ಲಿ ನಾಡಿದ್ದು ದಿನಾಂಕ 10 ರ ಭಾನುವಾರ ದಾವಣಗೆರೆ ಚೆಸ್ ಕ್ಲಬ್ ಹಾಗೂ ಸರ್ಕಲ್ ಚೆಸ್ ಅವರ ಸಹಯೋಗದೊಂದಿಗೆ ಗುರು ಭವನದಲ್ಲಿ ಓಪನ್ ರ್‍ಯಾಪಿಡ್ ಚೆಸ್ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ ಎಂದು ದಾವಣಗೆರೆ ಚೆಸ್ ಕ್ಲಬ್ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಈ ಪಂದ್ಯಾವಳಿಯನ್ನು ಭಾನುವಾರ ಬೆಳಗ್ಗೆ 10 ಗಂಟೆಗೆ ಸಂಸದ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟನೆ ಮಾಡಲಿದ್ದಾರೆ ಹಾಗೂ ಸಂಜೆ 5.30ಕ್ಕೆ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಈ ಪಂದ್ಯಾವಳಿಯಲ್ಲಿ ಗೆದ್ದ ಸ್ಪರ್ಧಾಳುಗಳಿಗೆ ಓಪನ್ ವಿಭಾಗದಲ್ಲಿ ಮೊದಲ 15 ಸ್ಥಾನಗಳಿಗೆ ನಗದು ಹಾಗೂ ಪಾರಿತೋಷಕ ಮತ್ತು 8,10,12,14 ವರ್ಷದ ಒಳಗಿನ ವಿಭಾಗದಲ್ಲಿ ತಲಾ 10 ವಿಶೇಷ ಬಹುಮಾನಗಳನ್ನು ನೀಡಲಾಗುವುದು. ಒಟ್ಟು 30,000 ನಗದು ಹಾಗೂ 45 ಪಾರಿತೋಷಕ (ಟ್ರೋಫಿ) ಗಳನ್ನು ನೀಡಲಾಗುವುದು ಎಂದು ಸಂಘದ ಕಾರ್ಯದರ್ಶಿ ಟಿ. ಯುವರಾಜ್ ತಿಳಿಸಿದರು.

ಈ ಪಂದ್ಯಾವಳಿ ಹೆಸರನ್ನು ನೋಂದಾಯಿಸಲು ನಾಳೆ ದಿನಾಂಕ 9 ಕೊನೆಯ ದಿನಾಂಕ ವಾಗಿರುತ್ತದೆ. ವಿವರಕ್ಕೆ ಸಂಪರ್ಕಿಸಿ : 99456 13469-72593 10197-99451 63469.

# ದೊಡ್ಡಬಾತಿಯಲ್ಲಿ ಇಂದು ಶ್ರೀ ಕೋಟೆ ಆಂಜನೇಯ ದೇವಸ್ಥಾನದ ಉದ್ಘಾಟನೆ



ಶ್ರೀ ಕೋಟೆ ಆಂಜನೇಯ ದೇವಸ್ಥಾನ ಉದ್ಘಾಟನೆ, ಶಿಲಾಮೂರ್ತಿ, ನವಗ್ರಹ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮವನ್ನು ಇಂದು ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಮಘಟ್ಟ ಪುರವರ್ಗ ಮಠದ ಶ್ರೀ ರೇವಣಸಿದ್ದ ಶಿವಾಚಾರ್ಯ ಮಹಾ ಸ್ವಾಮೀಜಿ ದಿವ್ಯ ಸಾನ್ನಿಧ್ಯ ಮತ್ತು ಆವರಗೊಳ್ಳದ ಶ್ರೀ ದೊಡ್ಡವೀರಯ್ಯ ಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 11 ಗಂಟೆಗೆ ಏರ್ಪಾಡಾಗಿರುವ ಧಾರ್ಮಿಕ ಸಭೆಯನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಜೆಸಿಬಿ ಹನುಮಂತಪ್ಪ ಅಧ್ಯಕ್ಷತೆ ವಹಿಸುವರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಲೋಕಸಭಾ ಸದಸ್ಯ ಡಾ. ಪ್ರಭಾ ಮಲ್ಲಿಕಾರ್ಜುನ್, ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕರುಗಳಾದ ಎಸ್.ವಿ. ರಾಮಚಂದ್ರ, ಹೆಚ್.ಎಸ್. ಶಿವಸಂಕರ್, ಎಸ್. ರಾಮಪ್ಪ, ಜಿಲ್ಲಾಧಿಕಾರಿ ಡಾ. ಜಿ.ಎಂ. ಗಂಗಾಧರ ಸ್ವಾಮಿ, ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಅತಿಥಿಗಳಾಗಿದ್ದಾರೆ.

# ನಗರದಲ್ಲಿ ಇಂದು ಕಾನೂನು ನೆರವು-ಅರಿವು

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆರ್.ಎಲ್ ಕಾನೂನು ಮಹಾವಿದ್ಯಾಲಯ ಮತ್ತು ವಕೀಲರ ಸಂಘ ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಆರ್.ಎಲ್ ಕಾನೂನು ಮಹಾವಿದ್ಯಾಲಯದ ಸಭಾ, ಭವನದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯ ಅಂಗವಾಗಿ 'ಕಾನೂನು ನೆರವು ಅರಿವು' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ.ಎನ್ ಹೆಗಡೆ ಉದ್ಘಾಟಿಸುವರು. ಆರ್.ಎಲ್ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಯತೀಶ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ ನಿವೇದಿತಾ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್ ಅರುಣಕುಮಾರ್, ಆರ್.ಎಲ್ ಕಾನೂನು ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ವಿದ್ಯಾಧರ ವೇದವರ್ಮ ಹಾಗೂ ಅಂತಿಮ ವರ್ಷದ ಕಾನೂನು ವಿದ್ಯಾರ್ಥಿ ಟಿ. ಕಿರಣಕುಮಾರ್ ಮತ್ತಿತರರು ಭಾಗವಹಿಸುವರು.



# ಸ್ನೇಹ ಸಂಘದಿಂದ ರಾಜ್ಯೋತ್ಸವ

ದಾವಣಗೆರೆ, ನ. 8 - ನಗರದ ಸ್ನೇಹ ಸಂಘದ ಆಶ್ರಯದಲ್ಲಿ 69ನೇ ವರ್ಷದ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಶ್ರೀ ಭುವನೇಶ್ವರಿ ಭಾವಚಿತ್ರಕ್ಕೆ ಮಾಲಾರ್ಪಣೆ ಯನ್ನು ಬಾಲಕ ಹರ್ಷದ್ ಮತ್ತು ಬುಜ್ಜಿ ಧ್ವಜಾರ ಹೋಣ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಪಿ. ಹುಲಿಗೇಶ್ ಅವರು ಕನ್ನಡ ನಾಡು ನುಡಿ ಬಗ್ಗೆ ಮಾತನಾಡಿದರು. ಅಧ್ಯಕ್ಷ ವೆಂಕಟೇಶ್ ಅವರು ಕೂಡ ಕನ್ನಡ ನಾಡು ನುಡಿಯ ಬಗ್ಗೆ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ನಂತರ ಎಲ್ಲರಿಗೂ ಸಿಹಿ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಎಂ.ಡಿ. ರಫೀ, ಬಿ. ಶಿವಕುಮಾರ್, ಹೆಚ್. ಫಕ್ರುಸಾಬ್, ದತ್ತಾತ್ರೇಯ ಜೋಶಿ, ಎಸ್. ಮಂಜುನಾಥ, ಸೈಫುಲ್ಲಾ, ರಮೇಶ್ .ಜೆ. ವತನ್, ಅಮೀನ್ ಸಾಬ್, ಪ್ರಕಾಶ್, ಜಿ.ವಿ. ಹುಸೇನ್ ಮತ್ತು ಕಾರ್ಯಕರ್ತರು, ಬಾಲಕರು ಉಪಸ್ಥಿತರಿದರು.

# ವಿಜಯಪುರ ವಕ್ಫ್ ಹಠಾವೋ ದೇಶ ಬಚಾವ್



ಮಲೇಬೆನ್ನೂರು, ನ. 8 - ವಿಜಯಪುರದಲ್ಲಿ 'ವಕ್ಫ್ ಹಠಾವೋ ದೇಶ ಬಚಾವೋ' ಮಾರಕ ವಕ್ಫ್ ಕಾಯ್ದೆ ನಿರ್ಮೂಲನೆ ನಮ್ಮೆಲ್ಲರ ಗುರಿ ಅನಿರ್ದಿಷ್ಟ ಅವಧಿಯವರೆಗೆ ನಡೆಯುತ್ತಿರುವ ಧರಣಿ ಸತ್ಯಾಗ್ರಹದಲ್ಲಿ ಪಂಚಮಸಾಲಿ ಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿಜಯಪುರ ಶಾಸಕ ಬಸವನಗೌಡ ಯತ್ನಾಳ್ ಅವರೊಂದಿಗೆ ಹರಿಹರ ಶಾಸಕ ಬಿ.ಪಿ. ಹರೀಶ್ ಭಾಗವಹಿಸಿದ್ದರು.

# ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಸಮೀಕ್ಷಾ ಕಾರ್ಯ

ದಾವಣಗೆರೆ, ನ.8- ಜಿಲ್ಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇದೇ ದಿನಾಂಕ 15 ರಂದು ಏಕಕಾಲದಲ್ಲಿ ಅನೈರ್ಮಲ್ಯ ಶೌಚಾಲಯಗಳು ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಸಮೀಕ್ಷಾ ಕಾರ್ಯವನ್ನು ನಡೆಸಲಾಗುತ್ತದೆ.ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಗ್ರಾಮ ಪಂಚಾಯತ್‌ಗಳ ಸಮೀಕ್ಷಾ ತಂಡದ ಪ್ರತಿನಿಧಿಗಳು ನಗರ, ಗ್ರಾಮಗಳಲ್ಲಿ ಸಮೀಕ್ಷೆ ನಡೆಸಲಿದ್ದು, ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳು ಖುದ್ದು ನಗರ, ಸ್ಥಳೀಯ ಸಂಸ್ಥೆಗಳ ಕಚೇರಿಗಳಿಗೆ ಹಾಜರಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ವ್ಯಾಪ್ತಿಯ ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯತ್ ಕಚೇರಿಗಳನ್ನು ಸಂಪರ್ಕಿಸಬಹುದು.

# ವಿನೋಬನಗರದಲ್ಲಿ ಚರಂಡಿ ಕಾಮಗಾರಿ ಅವೈಜ್ಞಾನಿಕ, ಕಳಪೆ : ವಕೀಲ ದಿವಾಕರ್

ದಾವಣಗೆರೆ, ನ. 8- ಇಲ್ಲಿನ ವಿನೋಬನಗರದ 1 ನೇ ಮುಖ್ಯ ರಸ್ತೆ ನಡೆಯುತ್ತಿರುವ ಚರಂಡಿ ಕಾಮಗಾರಿ ಕಳಪೆ, ಅವೈಜ್ಞಾನಿಕ ಮತ್ತು ಮಂದಗತಿಯಲ್ಲಿ ನಡೆಯುತ್ತಿದ್ದು, ಈ ಬಗ್ಗೆ ಗುತ್ತಿಗೆದಾರರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಅಧಿಕಾರಿಗಳು, ಆಯುಕ್ತರು ಕಾಮಗಾರಿ ಗುಣಮಟ್ಟವನ್ನು ಪರಿಶೀಲಿಸಿದ ನಂತರವೇ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ಬಿಜೆಪಿ ಕಾನೂನು ಪ್ರಕೋಷ್ಠದ ಸಂಚಾಲಕ ಹೆಚ್. ದಿವಾಕರ್ ಮನವಿ ಮಾಡಿದ್ದಾರೆ.

ಆಗಸ್ಟ್ ತಿಂಗಳಲ್ಲಿ ಕಾಮಗಾರಿ ಆರಂಭವಾಗಿದ್ದು, ಇದರಿಂದಾಗಿ ತಗ್ಗು ಪ್ರದೇಶದಲ್ಲಿನ ಜನರಿಗೆ ಮಳೆ ನೀರು ನುಗ್ಗಬಾರದು ಎಂದು ಮಾಡುತ್ತಿದ್ದು, ಇದನ್ನು 15,16 ನೇ ಕ್ರಾಸ್‌ನಿಂದ ಪ್ರಾರಂಭ ಮಾಡದೇ ಪಿ.ಬಿ. ರಸ್ತೆಯ ಕಡೆಯಿಂದ ಪ್ರಾರಂಭ ಮಾಡಿರುವುದು ಅವೈಜ್ಞಾನಿಕವಾಗಿರುತ್ತದೆ ಎಂದು ದೂರಿದ್ದಾರೆ.

16 ನೇ ಕ್ರಾಸ್ ಇಳಿಜಾರಿನಿಂದ ಪಿ.ಬಿ. ರಸ್ತೆಯ ಕಡೆಗೆ ನೀರು ಹರಿದು ಹೋಗಬೇಕಾಗಿರುತ್ತದೆ. ಹಾಗೆ ಮಾಡಿದ್ದರೂ ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು, ಇಂಜಿನಿಯರ್‌ಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೇ ಈಗ್ಗೆ ಮೂರು ತಿಂಗಳಿನಿಂದ ಎಲ್ಲಾ ಅಡ್ಡ ರಸ್ತೆಗಳ ಸಂಪರ್ಕ ಕಡಿತ ಮಾಡಿ ಅಲ್ಲಿನ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗುವಂತೆ ಮಾಡಿದ್ದಾರೆ.

ಚರಂಡಿಗಳಲ್ಲಿ ಸಾಕಷ್ಟು ಜನ ಬಿದ್ದು ತೊಂದರೆ ಅನುಭವಿಸಿದ್ದಾರೆ. ಅಲ್ಲದೇ ರಸ್ತೆ ತುಂಬೆಲ್ಲಾ ಜಲ್ಲಿ ಕಲ್ಲುಗಳು ಹರಡಿದ್ದು, ಅದನ್ನು ಸರಿ ಮಾಡುವ ಕೆಲಸ ಕೂಡ ಆಗಿಲ್ಲ. ಆ ಜಲ್ಲಿ ಕಲ್ಲುಗಳ ಮೇಲೆ ವಾಹನಗಳು ಓಡಾದಿದಾಗ, ಅವು ಮನೆಯ ಕಿಟಕಿ, ಬಾಗಿಲು, ವಾಹನಗಳಿಗೆ ಸಿಡಿಯುತ್ತಿರುತ್ತವೆ. ಇವೆಲ್ಲಾ ಸಮಸ್ಯೆಗಳನ್ನು ಸಂಬಂಧಪಟ್ಟ ಗುತ್ತಿಗೆದಾರರಿಗೆ ಹೇಳಿದರೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಹೇಳಿದ್ದಾರೆ.

ಕೂಡಲೇ ಕಾಮಗಾರಿ ಗುಣಮಟ್ಟವನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಆಯುಕ್ತರು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ದಿವಾಕರ್ ಕೋರಿದ್ದಾರೆ.



# ಅಂತರರಾಷ್ಟ್ರೀಯ ಯೋಗ ಸ್ಪರ್ಧೆಗೆ ಕೆ.ವೈ.ಸೃಷ್ಟಿ ಆಯ್ಕೆ

ದಾವಣಗೆರೆ, ನ. 7 - ಹಿಮಾಚಲ ಪ್ರದೇಶ ದಲ್ಲಿ ಕಳೆದ ವಾರ ನಡೆದ 49ನೇ ರಾಷ್ಟ್ರೀಯ ಮಟ್ಟದ ಸಬ್ ಜ್ಯೂನಿಯರ್ ಮತ್ತು ಜ್ಯೂನಿಯರ್ ಯೋಗ ಸ್ಪರ್ಧೆಯಲ್ಲಿ ಹರಿಹರ ಗಿರಿರಾಜ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಕೆ.ವೈ.ಸೃಷ್ಟಿ ದ್ವಿತೀಯ ಸ್ಥಾನ ಪಡೆದು, ಅಂತರರಾಷ್ಟ್ರೀಯ ಮಟ್ಟದ ಯೋಗ ಫೆಡರೇಷನ್ ಕಪ್‌ಗೆ ಆಯ್ಕೆ ಯಾಗಿದ್ದಾಳೆ. ಸಿಂಗಾಪುರದಲ್ಲಿ ಡಿಸೆಂಬರ್ ಕೊನೆ ವಾರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಯೋಗ ಫೆಡರೇಷನ್ ಕಪ್‌ನಲ್ಲಿ ಕೆ.ವೈ.ಸೃಷ್ಟಿ ಭಾಗವಹಿಸಲಿದ್ದಾರೆ.


**ಕಣ್ಣಿನ ಉಚಿತ ತಪಾಸಣೆ**

**ಡಾ।। ಕಾಕಡೆ,** ಕಣ್ಣಿನ ತಜ್ಞರು

ಪ್ರತಿ ಸೋಮವಾರ ಮಾತ್ರ ಬೆಳಿಗ್ಗೆ 11 ರಿಂದ 1 ಗಂಟೆಯವರೆಗೆ



• ಸೌತ್ ಇಂಡಿಯಾ ಆಪ್ಟಿಕಲ್ಸ್

ಬ್ಯಾಂಕ್ ಆಫ್ ಬರೋಡಾ ಹತ್ತಿರ, ರಾಂ ಅಂಡ್ ಕೋ ಸರ್ಕಲ್, ಪಿ.ಜೆ. ಬಡಾವಣೆ, ದಾವಣಗೆರೆ

ಉಚಿತ ತಪಾಸಣೆ ಮತ್ತು ನೋಂದಣಿಗಾಗಿ ಕರೆ ಮಾಡಿ. : 08192 231432


# ಪಾಲಿಕೆಯಿಂದ ವಿಜೃಂಭಣೆಯ ರಾಜ್ಯೋತ್ಸವ ಆಚರಣೆಗೆ ತೀರ್ಮಾನ



ದಾವಣಗೆರೆ, ನ. 8 - ಮಹಾನಗರ ಪಾಲಿಕೆಯಿಂದ ಇದೇ ದಿನಾಂಕ 28, 29 ಹಾಗೂ 30ರಂದು ಮೂರು ದಿನಗಳ ಕಾಲ ವಿಜೃಂಭಣೆಯಿಂದ 69ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಗುವುದು ಎಂದು ಮಹಾಪೌರರಾದ ಕೆ. ಚಮನ್ ಸಾಬ್ ಹೇಳಿದರು.

ಕನ್ನಡಪರ, ದಲಿತಪರ ಸಂಘ ಸಂಸ್ಥೆಗಳು ಹಾಗೂ ಪತ್ರಕರ್ತರ ಸಹಯೋಗದಲ್ಲಿ ನಗರದ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ ವರ್ಷ ಅತ್ಯಂತ ವಿಶೇಷವಾಗಿ ಕನ್ನಡ ರಾಜ್ಯೋತ್ಸವ ಆಚರಿಸಲು ನಿರ್ಧರಿಸಲಾಗಿದ್ದು, ಭುವನೇಶ್ವರಿ ಮೆರವಣಿಗೆಯನ್ನು ಅದ್ದೂರಿಯಾಗಿ ನಡೆಸಲಾಗುವುದು. ರಾಜ್ಯದ ಹೆಸರಾಂತ ಸಾಹಿತಿಗಳು ಹಾಗೂ ಕಲಾವಿದರನ್ನು ರಾಜ್ಯೋತ್ಸವಕ್ಕೆ ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ಪಾಲಿಕೆ ಆಯುಕ್ತೆ ಶ್ರೀಮತಿ ರೇಣುಕಾ ಮಾತನಾಡಿ, ಪಾಲಿಕೆಯಿಂದ ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಿಸಲು ಈ ವರ್ಷ 50 ಲಕ್ಷ ರೂ. ಬಜೆಟ್ ಮೀಸಲಿರಿಸಲಾಗಿದ್ದು, ಇದಕ್ಕಾಗಿ ಮಹಾಪೌರರ ಅಧ್ಯಕ್ಷತೆಯಲ್ಲಿ ಸಭೆ ನಡೆಸುವ ಮೂಲಕ ಟೆಂಡರ್ ಕರೆದು ಕಾರ್ಯಕ್ರಮ ರೂಪಿಸಲಾಗುವುದು. ನಗರದ ಪ್ರಮುಖ ವೃತ್ತಗಳನ್ನು ಸಹ ವಿಶೇಷವಾಗಿ ಅಲಂಕರಿಸಲಾಗುವುದು ಎಂದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಕಳೆದ 40 ವರ್ಷಗಳಿಂದ ಆಚರಿಸಲಾಗುತ್ತಿರುವ ಕನ್ನಡ ರಾಜ್ಯೋತ್ಸವ ಬರುಬರುತ್ತಾ ತನ್ನ ಮೆರುಗು ಕಳೆದುಕೊಳ್ಳುತ್ತಿದೆ. ಪ್ರಮುಖವಾಗಿ ಮೆರವಣಿಗೆ, ಸನ್ಮಾನ ಹಾಗೂ ಮನರಂಜನೆ ಕಾರ್ಯಕ್ರಮಗಳ ಸುಂದರವಾಗಿ ಹಾಗೂ ಶಿಸ್ತುಬದ್ಧವಾಗಿ ರೂಪಿಸಬೇಕು ಎಂದರು.

ರಾಜ್ಯೋತ್ಸವ ಪ್ರಶಸ್ತಿ ನೀಡುವುದು ಸಂತೆಯಾಗಬಾರದು. ಕನ್ನಡದ ಏಳಿಗೆಗೆ ದುಡಿದ ಚಳುವಳಿಗಾರರು, ಸಾಹಿತಿಗಳು ಹಾಗೂ ಕಲಾವಿದರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸಬೇಕು.

ಪಾಲಿಕೆಯಲ್ಲಿ ಉತ್ತಮ ಕೆಲಸ ನಿರ್ವಹಿಸಿದವರಿಗೆ ಶರಣೆ ಸತ್ಯಕ್ಕನ ಹೆಸರಿನಲ್ಲಿ ಪೌರ ಸೇವಾ ಪ್ರಶಸ್ತಿ ನೀಡಬೇಕು. ಮನರಂಜನೆ ಎಂದರೆ ಆರ್ಕೆಸ್ಟ್ರಾ ಮಾತ್ರವಲ್ಲ, ಜಾನಪದ ಕಲೆಗಳೂ ಸಹ ಮೇಳೈಸಬೇಕು ಎಂದು ಸಲಹೆ ನೀಡಿದರು. ಕನ್ನಡಪರ ಹೋರಾಟಗಾರ ನಾಗೇಂದ್ರ ಬಂಡೀಕರ್ ಮಾತನಾಡಿ, ಮೂರು ದಿನಗಳ ಕನ್ನಡ ರಾಜ್ಯೋತ್ಸವದಲ್ಲಿ ಮನರಂಜನೆ ಕಾರ್ಯಕ್ರಮದ ಜೊತೆಗೆ ರಾಜ್ಯದ ನೃತ್ಯಕಲೆ ಹಾಗೂ ಶಿಲ್ಪಕಲೆ ಹಾಗೂ ಸಾಹಿತ್ಯದ ವೈಭವ ಸಾರಬೇಕು. ಕವಿಗೋಷ್ಠಿ ಆಯೋಜಿಸಿ ಕವಿಗಳಿಗೆ ಗೌರವ ಸಲ್ಲಿಸಬೇಕು. ಮೆರವಣಿಗೆಯಲ್ಲಿ ಪಾಲಿಕೆ ನೌಕರರು ಕಡ್ಡಾಯವಾಗಿ ಭಾಗವಹಿಸಬೇಕು ಎಂದರು.

**69 ಸಾಧಕರನ್ನು ಗುರುತಿಸಿ ಸನ್ಮಾನ :** ಕನ್ನಡ ರಾಜ್ಯೋತ್ಸವವನ್ನು ಪ್ರತಿ ಮನೆಯಲ್ಲಿ ಹಬ್ಬದೋಪಾದಿಯಲ್ಲಿ ಆಚರಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ಸ್ಥಳೀಯ ಮತ್ತೂ ೨ಹೊರಿನ ಕಲಾವಿದರನ್ನು ಆಹ್ವಾನಿಸಿ, ನಾಡು-ನುಡಿ ಸಂಸ್ಕೃತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಬೇಕು. 69ನೇ ಕನ್ನಡ ರಾಜ್ಯೋತ್ಸವ ಹಿನ್ನೆಲೆಯಲ್ಲಿ 69 ಸಾಧಕರನ್ನು ಗುರುತಿಸಿ ಸನ್ಮಾನಿಸಬೇಕು ಎಂದು ಸಲಹೆ ನೀಡಿದರು.

ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ನಗರದಲ್ಲಿ ಇನ್ನೂ ಸಹ ಶೇ. 15ರಷ್ಟು ಆಂಗ್ಲ ನಾಮಫಲಕಗಳು ರಾರಾಜಿಸುತ್ತಿದ್ದು, ಎಲ್ಲವನ್ನೂ ತೆರವುಗೊಳಿಸಬೇಕು. ಎಲ್ಲಾ ವೃತ್ತಗಳನ್ನು ಹಳದಿ ಮತ್ತು ಕೆಂಪು ಬಣ್ಣಗಳಿಂದ ಅಲಂಕರಿಸಿ ಹಬ್ಬದ ವಾತಾವರಣ ಸೃಷ್ಟಿಸಬೇಕು ಎಂದು ಹೇಳಿದರು.

ಕನ್ನಡಪರ ಸಂಘಟನೆ ಮುಖಂಡ ಸೋಮಶೇಖರ್ ಮಾತನಾಡಿ, ನಗರದ ಮಾಲ್‌ಗಳ ಒಳಗಡೆ ಸಂಪೂರ್ಣ ಆಂಗ್ಲ ಫಲಕ ಅಳವಡಿಸಲಾಗಿದ್ದು, ಕನ್ನಡ ನಾಮಫಲಕ ಅಳವಡಿಸಲು ಆದೇಶಿಸಬೇಕು. ರಾಜ್ಯೋತ್ಸವ ಸನ್ಮಾನ ನೈಜ ಸಾಧಕರಿಗೆ ಸಲ್ಲಬೇಕು ಎಂದರು.

ಮಕ್ಕಳ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಫ್ರಾನ್ಸಿಸ್ ಡಿಸೋಜಾ ಮಾತನಾಡಿ, ಮಕ್ಕಳ ಕವಿಗೋಷಅಠಿ ಹಾಗೂ ಭಾಷಣ ಸ್ಪರ್ಧೆ ಆಯೋಜಿಸಿ, ಕನ್ನಡದ ಅಭಿಮಾನ ಮೂಡಿಸಬೇಕು ಎಂದರು.

ಪಾಲಿಕೆ ಸದಸ್ಯರಾದ ಮೀನಾಕ್ಷಇ ಜಗದೀಶ್, ವೀಣಾ ನಂಜಪ್ಪ, ಸುಧಾ ಇಟ್ಟಿಗುಡಿ ಮಂಜುನಾಥ್, ಪ್ರಸನ್ನಕುಮಾರ್, ಎಸ್.ಟಿ. ವೀರೇಶ್, ವೀರೇಶ್ ಪೈಲ್ವಾನ್, ಮುಖಂಡರಾದ ಸೋಮ್ಲಾಪುರ ಹನುಮಂತಪ್ಪ, ರಾಜಶೇಖರ್ ಗುಂಡಗಟ್ಟಿ, ಕೆ.ಜಿ. ಶಿವಕುಮಾರ್, ಅವಿನಾಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


**ಸಿದ್ಧ ಸಮಾಧಿ ಯೋಗ ಶಿಬಿರ**



ದಾವಣಗೆರೆ ಜನತೆಗೆ ಸಿಹಿ ಸುದ್ದಿ



ಯೋಗ, ಧ್ಯಾನ, ಪ್ರಾಣಾಯಾಮ, ಉತ್ತಮ ಆಹಾರ ಪದ್ಧತಿಯ SSY ತರಬೇತಿ ಶಿಬಿರ

ರೇಣುಕಾ ಮಾತಾಜಿ ಸಾನ್ನಿಧ್ಯದಲ್ಲಿ ಇದೇ ನವೆಂಬರ್ 10ರ ಭಾನುವಾರದಿಂದ ರಾಂ ಅಂಡ್ ಕೋ ವೃತ್ತದಲ್ಲಿನ ಶ್ರೀ ವಿನಾಯಕ ದೇವಸ್ಥಾನದ ಮಹಡಿ ಮೇಲೆ ಪ್ರತಿ ದಿನ ಸಂಜೆ 5.45ಕ್ಕೆ ಸಿದ್ಧ ಸಮಾಧಿ ಯೋಗ ತರಬೇತಿ ಶಿಬಿರ ಆರಂಭವಾಗಲಿದೆ.

ಉದ್ವೇಗ ರಹಿತ ಜೀವನ, ರಕ್ತದೊತ್ತಡ, ಮಧುಮೇಹ, ಅಸ್ತಮಾ, ಹೃದಯ ರೋಗ, ಅಲ್ಸರ್, ನರದೌರ್ಬಲ್ಯ, ಸಂಧಿವಾತ ಇತ್ಯಾದಿ ಕಾಯಿಲೆಗೆ ಚಿಕಿತ್ಸೆ ಹಾಗೂ ಪರಿಹಾರೋಪಾಯ ಎಸ್.ಎಸ್.ವೈ. ತರಬೇತಿ

ಮಾಹಿತಿಗಾಗಿ ಸಂಪರ್ಕಿಸಿ: 99646 75441, 94486 67523, 97319 93770

# ರಾಜ್ಯೋತ್ಸವ : ನಗರದ ಗ್ಲಾಸ್‌ಹೌಸ್‌ನಲ್ಲಿ ಇಂದಿನಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು

ದಾವಣಗೆರೆ ಜಿಲ್ಲಾಡಳಿತ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇಂದು ಸಂಜೆ 5.30ಕ್ಕೆ ಗಾಜಿನ ಮನೆಯಲ್ಲಿ 2024 ನವೆಂಬರ್ ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಸುವರ್ಣ ಸಂಭ್ರಮವನ್ನು ಏರ್ಪಡಿಸಲಾಗಿದೆ.

ಇದೇ ದಿನಾಂಕ 30 ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು, ಸಾರ್ವಜನಿಕರು ಭಾಗವಹಿಸಿ ವೀಕ್ಷಣೆ ಮಾಡಲು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಇಂದು ಚೇತನ್ ಕುಮಾರ್ ಮತ್ತು ಸಂಗಡಿಗರಿಂದ ಸುಗಮ ಸಂಗೀತ, ಇಂಚನ ಮತ್ತು ದರ್ಶನ್ ಇವರಿಂದ ಸ್ಯಾಕ್ಸೋಫೋನ್ ವಾದನ, ಬಾಲಿ ಜಂಬೆ ಮತ್ತು ಸಂಗಡಿಗರು ಜಂಬೆ ಝಲಕ್ ಹಾಗೂ ಕಡಬಗೆರೆ ಶ್ರೀನಿವಾಸ್ ಅವರಿಂದ ಜಾನಪದ ಜಾದೂ ನಡೆಯಲಿದೆ.

ನಾಳೆ ಭಾನುವಾರ ಆನಂದಗೌಡ ಪಾಟೀಲ್ ಮತ್ತು ಸಂಗಡಿಗರಿಂದ ಹಿಂದೂಸ್ತಾನಿ ಸಂಗೀತ, ಸವಿತಾ ಚಿರುಕುಣಯ್ಯ ಪೂಜಾ ಕುಣಿತ, ನಮನ ಅಕಾಡೆಮಿಯ ವರಿಂದ ನೃತ್ಯರೂಪಕ, ದಿನಾಂಕ 16 ರಂದು ಯುಗಧರ್ಮ ರಾಮಣ್ಣ ಅವರಿಂದ ಜಾನಪದ ಗೀತೆಗಳು, ಪಂಡಿತ್ ರವೀಂದ್ರ ಅವರಿಂದ ಹಿಂದೂಸ್ತಾನಿ ಸಂಗೀತ, ಪಲ್ಲವಿ ಮತ್ತು ಸಂಗಡಿಗರಿಂದ ಮಹಿಳಾ ವೀರಗಾಸೆ ಜರುಗಲಿದೆ.

ಇದೇ ದಿನಾಂಕ 17 ರಂದು ಮಹೇಶ್ ಕುಮಾರ್ ಮತ್ತು ತಂಡದವರಿಂದ ಚಂಡೆವಾದನ, ಬಸವ ಕಲಾ ಲೋಕ ಅವರಿಂದ ಸಂಗೀತ ಕಾರ್ಯಕ್ರಮ, ಪಂಡಿತ್ ಎಂ.ಎಸ್ ಪ್ರದೀಪ್ ಕುಮಾರ್, ಇವರಿಂದ ಸಿತಾರ್ ವಾದನ, ದಿನಾಂಕ 23 ರಂದು ರಾಮಚಂದ್ರ ಹಡಪದ ಇವರಿಂದ ಸಂಗೀತ ಕಾರ್ಯಕ್ರಮ, ಸಂಕರ್ಷಣ ನೃತ್ಯ ಶಾಲೆಯಿಂದ ನೃತ್ಯ ರೂಪಕ ಏರ್ಪಾಡಾಗಿದೆ.

ಇದೇ ದಿನಾಂಕ 24 ರಂದು ರಮೇಶ್‌ನಾಥ್ ಕದ್ರಿ ಇವರಿಂದ ಸ್ಯಾಕ್ಸೋಫೋನ್ ವಾದನ, ನೂಪುರ ಕಲಾ ಸಂಸ್ಥೆಯವರಿಂದ ನೃತ್ಯ ರೂಪಕ, ನವೆಂಬರ್ 29 ರಂದು ಶೃತಿ ಮತ್ತು ಸಂಗಡಿಗರಿಂದ ಲಂಬಾಣಿ ನೃತ್ಯ, ಅದಮ್ಯ ಕಲಾ ಸಂಸ್ಥೆಯವರಿಂದ ವಾದ್ಯ ಸಂಗೀತ, ಪರಶುರಾಮ್ ಸಂಗಡಿಗರಿಂದ ಜಾನಪದ ಸಂಗೀತ, ನವೆಂಬರ್ 30 ರಂದು ಚಿರಂತನ ಅಕಾಡೆಮಿಯಿಂದ ನೃತ್ಯ ರೂಪಕ, ಸವಿತಾ ಗಣೇಶ್ ಅವರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

# ಹಾಸ್ಟೆಲ್ : ಬಯೋಮೆಟ್ರಿಕ್ ಮ್ಯಾಪ್ ಮಾಡಲು ಸೂಚನೆ



ದಾವಣಗೆರೆ, ನ. 8- ಜಿಲ್ಲೆಯಲ್ಲಿನ ಎಲ್ಲಾ ಮೆಟ್ರಿಕ್ ಪೂರ್ವ ಹಾಸ್ಟೆಲ್ ವಿದ್ಯಾರ್ಥಿಗಳ ಬಯೋಮೆಟ್ರಿಕ್ ಮ್ಯಾಪ್ ಮಾಡಬೇಕೆಂದು ಜಿಲ್ಲಾ ಪಂಚಾಯ್ತಿ ಸಿಇಓ ಸುರೇಶ್ ಬಿ.ಇಟ್ನಾಳ್ ಸೂಚನೆ ನೀಡಿದರು.

ಅವರು ಶುಕ್ರವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಹಾಸ್ಟೆಲ್ ವಾರ್ಡನ್‌ಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಸ್ಟೆಲ್ ಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಬಯೋಮೆಟ್ರಿಕ್ ಹಾಜರಾತಿಯನ್ನು ಪರಿಶೀಲನೆ ಮಾಡಬೇಕು. ಹಾಗೂ ಬಿಇಓಗಳು ಸೋಮವಾರದಂದು ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ನೀಡಲಾಗುವ ವಿವಿಧ ಬಗೆಯ ವಿದ್ಯಾರ್ಥಿ ವೇತನಗಳ ಕುರಿತು ಮಾಹಿತಿ ನೀಡುವ ಆಂದೋಲನ ಕೈಗೊಳ್ಳಬೇಕು. ಸೌಲಭ್ಯಗಳು ಅರ್ಹ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಉಚಿತ ವಿದ್ಯಾರ್ಥಿ ವೇತನಗಳು ಸಿಗುವಂತಾಗಬೇಕು ಎಂದು ತಿಳಿಸಿದರು.

ಹಾಸ್ಟೆಲ್ ವಾರ್ಡನ್‌ಗಳು ಗುಣಮಟ್ಟದ ಆಹಾರ ನೀಡಬೇಕು. ಹಾಸ್ಟೆಲ್ ವಾತಾವರಣವನ್ನು ಸ್ವಚ್ಛವಾಗಿ ಇರಿಸಿಕೊಳ್ಳಬೇಕು. ಒಂದು ವೇಳೆ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಮತ್ತು ಸ್ವಚ್ಚತೆಯಲ್ಲಿ ಲೋಪ ದೋಷ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣ ನಾಯಕ್, ಸಿಪಿಓ ಮಲ್ಲನಾಯಕ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್ ಕೆ. ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಿರಿಗೆರೆಯಲ್ಲಿನ ಇಂದಿನ ತರಳಬಾಳು ನುಡಿಹಬ್ಬಕ್ಕೆ ಉಚಿತ ಬಸ್ ವ್ಯವಸ್ಥೆ

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆ ಹಾಗೂ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರ ಸಹಯೋಗದಲ್ಲಿ ನಡೆಯುತ್ತಿರುವ ತರಳಬಾಳು ನುಡಿಹಬ್ಬ -2024 ಕಾರ್ಯಕ್ರಮದ 2 ನೇ ದಿನಕ್ಕೂ ಸಿರಿಗೆರೆಗೆ ಹೋಗಿಬರಲು ಉಚಿತ ಬಸ್ ವ್ಯವಸ್ಥೆಯನ್ನು ಬೃಹನ್ಮಠ ದಿಂದ ಮಾಡಲಾಗಿದೆ.

ಇಂದಿನ ನುಡಿಹಬ್ಬದಲ್ಲಿ ಕವಿಗೋಷ್ಠಿ ಹಾಗೂ ಜಾನಪದ ಗೋಷ್ಠಿ ನಡೆಯುತ್ತದೆ. ಇಂದು ಬೆಳಿಗ್ಗೆ 8.30 ಕ್ಕೆ ಕುವೆಂಪು ಕನ್ನಡ ಭವನದಿಂದ ಬಸ್ ಹೊರಡುತ್ತದೆ. ಬರಲಿಚ್ಛಿಸುವವರು ಸೂಚಿಸಿದ ಸಮಯಕ್ಕೆ ಕುವೆಂಪು ಕನ್ನಡ ಭವನಕ್ಕೆ ಬರಬೇಕೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ ವಾಮದೇವಪ್ಪ ನವರು ತಿಳಿಸಿದ್ದಾರೆ.

# ಕೆಂಪು-ಹಸಿರು- ನೀಲಿ ಬಾವುಟಗಳು ಒಂದಾಗಬೇಕಿದೆ

## ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ಪ್ರಥಮ ಸಮ್ಮೇಳನದಲ್ಲಿ ಡಾ.ರಾಮಚಂದ್ರಪ್ಪ



ದಾವಣಗೆರೆ, ನ. 8- ಕೆಂಬಾವುಟದ ಕಾರ್ಮಿಕರು, ಹಸಿರು ಬಾವುಟದ ಅನ್ನದಾತರು ಮತ್ತು ನೀಲಿ ಬಾವುಟದ ದಲಿತರು ಒಂದಾಗಿ ಭಾರತದ ತ್ರಿವರ್ಣ ಧ್ವಜ ರಕ್ಷಣೆ ಮಾಡುವ ಅವಶ್ಯವಿದೆ. ಈ ಮೂವರು ಒಟ್ಟಾಗಿ ನಿರಂತರವಾದ ಆಂದೋಲನ ನಡೆಸಿದಾಗ ಮಾತ್ರ ಭಾರತದ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆ, ಅನ್ನದಾತರ ಭೂಮಿ, ಹಕ್ಕುಗಳು ಉಳಿಯಲು ಸಾಧ್ಯ ಎಂದು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಹೇಳಿದರು.

ನಗರದ ಜಯದೇವ ವೃತ್ತದ ಬಳಿ ಇರುವ ಶ್ರೀ ನಾಟ್ಯಾಚಾರ್ಯ ಕುಲಕರ್ಣಿ ರಸ್ತೆಯಲ್ಲಿ ಹಮ್ಮಿಕೊಂಡಿದ್ದ ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ಪ್ರಥಮ ರಾಜ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ದಲಿತ ಮತ್ತು ಕಾರ್ಮಿಕ ಸಂಘಟನೆಗಳು ಒಂದೇ ವೇದಿಕೆಯಡಿ ಒಗ್ಗೂಡುವ ತುರ್ತು ಅಗತ್ಯ ಮತ್ತು ಅನಿವಾರ್ಯ ಕೂಡ. ದಲಿತರು, ರೈತರು ಮತ್ತು ಕಾರ್ಮಿಕರು ಆಂದೋಲನದ ಮೂಲಕ ದೇಶ ಕಟ್ಟುವಲ್ಲಿ ಹೊಸ ಭಾಷ್ಯ ಬರೆಯಬೇಕೆಂದರು.

ದೇಶದ ಮೂಲ ನಿವಾಸಿಗಳಾದ ದ್ರಾವಿಡರು ನಿರಂತರವಾಗಿ ಹೋರಾಟ ಮಾಡುತ್ತಾ ಬಂದಿದ್ದರೂ ಸಹ ತಮಗೆ ದೊರೆಯಬೇಕಾಗಿದ್ದ ಹಕ್ಕುಗಳು ಸಿಗಲಿಲ್ಲ. ಇದೀಗ ಸಂಘಟನಾತ್ಮಕ ಹೋರಾಟದಿಂದ ಹಕ್ಕುಗಳನ್ನು ಪಡೆಯಬೇಕಾಗಿದೆ ಎಂದರು.

ಪ್ರಾಚೀನ ಕಾಲದಿಂದಲೂ ವರ್ಗ ಮತ್ತು ಜಾತಿ ವ್ಯವಸ್ಥೆ ವಿರುದ್ಧದ ಹೋರಾಟ ನಡೆಯುತ್ತಲೇ ಬರುತ್ತಿದೆ. ಲೋಹಿಯಾ ಅವರು ಜಾತಿ ಮತ್ತು ವರ್ಗ ಹೋರಾಟ ಒಟ್ಟಾಗಿಯೇ ನಡೆಯಬೇಕೆಂದು ಹೇಳಿದ್ದರು. ಅಂಬೇಡ್ಕರ್ ಅವರ ನಿಲುವು ಸಹ ಅದೇ ಆಗಿತ್ತು. ಈಗ ಸಂಘಟಿತ ಹೋರಾಟ ನಡೆಸುವ ಮೂಲಕ ಹಕ್ಕುಗಳನ್ನು ಪಡೆಯಬೇಕೆಂದು ಸಲಹೆ ನೀಡಿದರು.

ದಲಿತ ಸಮುದಾಯಗಳ ಹಕ್ಕುಗಳಿಗೆ ಮೊದಲ ತಡೆ ಎಂದರೆ ಸನಾತನತೆ, ಧರ್ಮ, ದೇವರ ಹೆಸರಿನಲ್ಲಿ ದಲಿತ ಸಮುದಾಯಗಳಿಗೆ ದೊರಕಬೇಕಾದ ಹಕ್ಕುಗಳ ದಮನ ಮಾಡಲಾಗುತ್ತಿದೆ. ಪುರಾತನತೆಯ ಪ್ರಕಾರ ಎಲ್ಲರೂ ಸಮಾನರು. ಆದರೆ ಸನಾತನತೆ ಅದಕ್ಕೆ ಅವಕಾಶ ನೀಡುತ್ತಿಲ್ಲ. ಕತ್ತಿ ಚುಚ್ಚುತ್ತೇ ಎಂಬ ಸತ್ಯ ಗೊತ್ತಿದ್ದರೂ ಅದನ್ನು ಚುಂಬಿಸುವ ಕೆಲಸ ನಡೆಯುತ್ತಿದೆ. ಹಕ್ಕುಗಳನ್ನು ಕೇಳುವವರಿಗೆ ನಗರ ನಕ್ಸಲರ ಪಟ್ಟ ಕಟ್ಟಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಅನೇಕ ಕಾರ್ಮಿಕ ಚಳವಳಿಗಳಿಗೆ ನಾಂದಿ ಹಾಡಿರುವ, ಹೋರಾಟದ ಕಿಚ್ಚು ಹಚ್ಚಿರುವ ದಿ. ಪಂಪಾಪತಿ ಅವರ ಕರ್ಮಭೂಮಿಯಲ್ಲಿ ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ಪ್ರಥಮ ಸಮ್ಮೇಳನ ಹಮ್ಮಿಕೊಂಡಿರುವುದು ಸಂತಸದ ಸಂಗತಿ ಎಂದರು.

ಶಿಕ್ಷಣದಿಂದ ಮಾತ್ರ ಸಮಾಜ ಬದಲಾವಣೆ ಸಾಧ್ಯ ಎಂಬ ಸತ್ಯವನ್ನು ಎಲ್ಲರೂ ಅರಿಯಬೇಕಾಗಿದೆ. ದಲಿತರು, ಕಾರ್ಮಿಕರು ಮತ್ತು ರೈತರ ಚಿಂತನೆಗಳೆಲ್ಲವೂ ಒಂದೇ ಆಗಿದ್ದು, ಇವುಗಳನ್ನು ಒಗ್ಗೂಡಿಸಿ ಮುನ್ನಡೆಸುವ ದಿಟ್ಟ ಸಾರಥಿ ಅಗತ್ಯವಿದೆ. ಹಿಂದಿನ ಕಾರ್ಮಿಕ ಸಂಘಟನೆಗಳು ಒಂದು ಕರೆ ಕೊಟ್ಟರೂ ಸಾಕು ಲಕ್ಷಾಂತರ ಕಾರ್ಮಿಕರು ಸೇರುತ್ತಿದ್ದ ಉದಾಹರಣೆಗಳಿವೆ ಎಂಬುದನ್ನು ನೆನಪು ಮಾಡಿಕೊಂಡರು.

ಸರ್ಕಾರಕ್ಕೆ ಚಾಟಿ ಬೀಸುವ ಜನಾಂದೋಲನ ನಡೆದಾಗ ಮಾತ್ರ ಆಗ ಯಾವುದೇ ಸರ್ಕಾರಗಳಿರಲಿ ಸ್ಪಂದಿಸಲು ಮುಂದಾಗುತ್ತವೆ ಎಂದು ಹೇಳಿದರು.

ಶಿಕ್ಷಣ ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ಪ್ರಮುಖ ಗುರಿಯಾಗಬೇಕು. ಪ್ರತಿಯೊಬ್ಬರೂ ಶಿಕ್ಷಣವಂತರಾದಾಗ ತಮಗೆ ಸಿಗಬೇಕಾದ ಹಕ್ಕುಗಳು ಮತ್ತು ಸವಲತ್ತುಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮೊಂದಿಗೆ ನಾನೂ ಸಹ ಇರುತ್ತೇನೆ ಎಂದು ಆಶ್ವಾಸನೆ ನೀಡಿದರು.

'ಹೊಸತು' ಮಾಸ ಪತ್ರಿಕೆ ಸಂಪಾದಕರೂ, ಹಿರಿಯ ಕಾರ್ಮಿಕ ಮುಖಂಡರಾದ ಡಾ. ಸಿದ್ದನಗೌಡ ಪಾಟೀಲ್ ಮಾತನಾಡಿ, ತ್ರಿವರ್ಣ ಧ್ವಜದ ಘನತೆ ಕಾಪಾಡಲು ಕಾರ್ಮಿಕರ ಕೆಂಪು, ರೈತರ ಹಸಿರು ಮತ್ತು ದಲಿತರ ನೀಲಿ ಬಾವುಟಗಳು ಒಂದಾಗಬೇಕಾಗಿದೆ. ಈ ಮೂರು ಸಂಘಟನೆಗಳು ಒಗ್ಗೂಡಿ ಪ್ರಭುತ್ವ ಸಮಾಜವಾದ ರೂಪಿಸಬೇಕಾದ ಅಗತ್ಯವಿದೆ ಎಂದರು.

ಭಾರತದ ತ್ರಿವರ್ಣ ಧ್ವಜ, ಭಾಷಾವಾರು ಪ್ರಾಂತ್ಯ ನೀತಿಯನ್ನು ಒಪ್ಪಿಕೊಂಡಿಲ್ಲವೋ ಅಂತಹವರ ಕೈಯಲ್ಲಿ ದೇಶದ ಅಧಿಕಾರವಿದೆ. ಅಪಾಯಕಾರಿ ಆಳ್ವಿಕೆಯ ತತ್ವದಿಂದಾಗಿ ದಲಿತರು, ರೈತರು, ಕಾರ್ಮಿಕರು ತಮಗೆ ದಕ್ಕಬೇಕಾಗಿದ್ದ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ಅಂಬೇಡ್ಕರರ ಆಶಯದಂತೆ ಜನಪರರು ಮತ್ತು ಪ್ರಗತಿಪರರು ಒಂದಾಗಬೇಕಾದ ಅನಿವಾರ್ಯತೆ ಎದುರಾಗಿದೆ. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಆತಂಕ ವ್ಯಕ್ತಪಡಿಸಿದರು.

ದಲಿತ ಚಿಂತಕ ಡಾ. ಸದಾಶಿವ ಮರ್ಜಿ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ರಾಷ್ಟ್ರೀಯ ಮಂಡಳಿ ಅಧ್ಯಕ್ಷ ಎ. ರಾಮಮೂರ್ತಿ, ಎಐಟಿಯುಸಿ ರಾಜ್ಯ ಮಂಡಳಿ ಉಪಾಧ್ಯಕ್ಷ ಹೆಚ್.ಜಿ. ಉಮೇಶ್ ಆವರಗೆರೆ, ಎನ್.ಎಫ್.ಐ. ಡಬ್ಲ್ಯೂ ರಾಜ್ಯ ಮಂಡಳಿ ಪ್ರಧಾನ ಕಾರ್ಯದರ್ಶಿ ರೇಣುಕಮ್ಮ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಇತರೆ ಸಂಘಟನೆಗಳ ಮುಖಂಡರಾದ ಪಿ. ಷಣ್ಮುಖಸ್ವಾಮಿ, ಮಂಜುಳಾ ಸದಾಶಿವ ಮರ್ಜಿ, ವೀಣಾ ನಾಯಕ್, ಕೆ. ಎಸ್. ಜನಾರ್ದನ್, ಹೆಗ್ಗೆರೆ ರಂಗಪ್ಪ, ಹೆಚ್.ಎಂ. ಸಂತೋಷ್, ಡಾ. ಮಹೇಶ ಕುಮಾರ್ ರಾಥೋಡ್, ಸುರೇಶ್, ಹರಿಹರದ ಹೆಚ್. ಮಲ್ಲೇಶ್, ಐರಣಿ ಚಂದ್ರು, ದ್ವಾರಕೀಶ್, ಶೌಕತ್ ಅಲಿ, ಹುಲುಗಪ್ಪ ಅಕ್ಕಿರೊಟ್ಟಿ, ನರೇಗಾ ರಂಗನಾಥ್ ಮತ್ತಿತರರು ಭಾಗವಹಿಸಿದ್ದರು.

# ಕುಮಾರಸ್ವಾಮಿ ವಿರುದ್ಧ ಬಲವಂತದ ಕ್ರಮ ಬೇಡ : ಹೈಕೋರ್ಟ್

ಬೆಂಗಳೂರು, ನ.8- 'ಚನ್ನಪಟ್ಟಣ ವಿಧಾನ ಸಭಾ ಉಪಚುನಾವಣೆಯ ಖರ್ಚಿಗೆ 50 ಕೋಟಿ ರೂ. ಬೇಡಿಕೆ ಇರಿಸಿ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕೇಂದ್ರ ಸಚಿವ ಎಚ್. ಡಿ.ಕುಮಾರಸ್ವಾಮಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿರುವ ಅರ್ಜಿಯನ್ನು, ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎ.ವಿ.ನಿಶಾಂತ್, 'ಇದೇ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಜೆಡಿಎಸ್ ನಗರ ಘಟಕದ ಅಧ್ಯಕ್ಷ ರಮೇಶ್‌ಗೌಡ ವಿರುದ್ಧ ಯಾವುದೇ ಬಲವಂತ ಕ್ರಮ ಕೈಗೊಳ್ಳದಂತೆ ಹೈಕೋರ್ಟ್ ಈಗಾಗಲೇ ಆದೇಶಿಸಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ, 'ಪ್ರಕರಣದ ಮತ್ತೊಬ್ಬ ಆರೋಪಿಯಾಗಿರುವ ಕುಮಾರಸ್ವಾಮಿ ಅವರಿಗೂ ಈ ಹಿಂದಿನ ಆದೇಶ ಅನ್ವಯವಾಗುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

# ಶಿಗ್ಗಾಂವ್ ಉಪ ಚುನಾವಣೆ ವೀಕ್ಷಕರಾಗಿ ಬಸವರಾಜ್ ನೇಮಕ



ದಾವಣಗೆರೆ, ನ.8- ಶಿಗ್ಗಾಂವ್ ವಿಧಾನಸಭಾ ಉಪಚುನಾವಣೆಯ ವೀಕ್ಷಕರನ್ನಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಅವರನ್ನು ನೇಮಕ ಮಾಡಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಅವರು ಆದೇಶ ಮಾಡಿದ್ದಾರೆ.

# 16ರೊಳಗಿನ ಮಕ್ಕಳಿಗೆ ಜಾಲತಾಣ ನಿರ್ಬಂಧ : ವ್ಯಾಪಕ ಬೆಂಬಲ

ಮೆಲ್ಬೋರ್ನ್, ನ. 8- 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಗೆ ನಿರ್ಬಂಧ ಹೇರಲು ಉದ್ದೇಶಿಸಿರುವ ಸರ್ಕಾರದ ಕ್ರಮಕ್ಕೆ ಆಸ್ಟ್ರೇಲಿಯಾದ ಎಲ್ಲ ರಾಜ್ಯಗಳು ಹಾಗೂ ಪ್ರಾಂತ್ಯಗಳು ಸರ್ವಾನುಮ ತದಿಂದ ಶುಕ್ರವಾರ ಬೆಂಬಲ ಸೂಚಿಸಿವೆ.

ದೇಶದ ಎಂಟು ಪ್ರಾಂತ್ಯಗಳ ನಾಯಕರೊಂದಿಗೆ ಪ್ರಧಾನಿ ಆ್ಯಂಟೊನಿ ಅಲ್ಬನೀಸ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತುಕತೆ ನಡೆಸಿದರು. ಜಗತ್ತಿನಲ್ಲಿಯೇ ಮೊದಲ ಬಾರಿಗೆ ಇಂಥದ್ದೊಂದು ಕ್ರಮವನ್ನು ಆಸ್ಟ್ರೇಲಿಯಾ ಸರ್ಕಾರ ಕೈಗೊಳ್ಳಲು ಸಿದ್ಧವಾಗಿದೆ ಎಂದು ಪ್ರಧಾನಿ ಆಂಟೊನಿ ಹೇಳಿದ್ದಾರೆ.

ವಯೋಮಿತಿಯನ್ನು 14 ಅಥವಾ 16ಕ್ಕೆ ನಿಗದಿಪಡಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಾಗ ತಸ್ಮಾನಿಯಾ ರಾಜ್ಯವು ವಯೋಮಿತಿಯನ್ನು 14ಕ್ಕೆ ನಿಗದಿಪಡಿಸಿ ಎಂಬ ಸಲಹೆ ನೀಡಿತ್ತು. ಆದರೆ, ದೇಶದಲ್ಲಿ ಒಂದೇ ರೀತಿಯ ಕಾನೂನು ಜಾರಿಯಾಗಬೇಕು ಎನ್ನುವ ಉದ್ದೇಶದಿಂದ ಈ ಸಲಹೆಯನ್ನು ನಿರಾಕರಿಸಲಾಗಿತ್ತು. ಆಸ್ಟ್ರೇಲಿಯಾದ ಮುಖ್ಯ ವಿರೋಧ ಪಕ್ಷವು ಈಗಾಗಲೇ ಈ ಕ್ರಮವನ್ನು ಬೆಂಬಲಿಸಿದೆ. ಆದರೆ, ಗ್ರೀನ್ಸ್ ಪಕ್ಷ ಮಾತ್ರ ಇದನ್ನು ವಿರೋಧಿಸಿದೆ. 'ಇಂಥ ಕ್ರಮಗಳಿಂದ ಸ್ವೀಡನ್‌ನ ಪರಿಸರ ಕಾರ್ಯಕರ್ತೆ ಗ್ರೇಟಾ ಥನ್‌ಬರ್ಗ್ ಅಂತಹವರು ನಮ್ಮ ನೆಲದಲ್ಲಿ ಹುಟ್ಟುವುದಕ್ಕೇ ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

ಮಾನಸಿಕ ಆರೋಗ್ಯ ವೈದ್ಯರು, ತಜ್ಞರು ಕೂಡ ಈ ಕ್ರಮವನ್ನು ವಿರೋಧಿಸಿದ್ದಾರೆ. ಆದರೆ, ಪ್ರಮುಖ ವಿರೋಧ ಪಕ್ಷವು ಈ ಕ್ರಮವನ್ನು ಬೆಂಬಲಿಸಿರುವುದರಿಂದ ಸಂಸತ್ತಿನಲ್ಲಿ ಈ ಕುರಿತ ಮಸೂದೆಯು ಸುಲಭವಾಗಿ ಪಾಸಾಗಲಿದೆ ಎನ್ನಲಾಗುತ್ತಿದೆ.

# ನಗರ ವಿನಾಯಕ ಬಡಾವಣೆಯಲ್ಲಿ ಇಂದು ಆರೋಗ್ಯ ತಪಾಸಣಾ ಶಿಬಿರ

ವಿದ್ಯಾನಗರ ವಿನಾಯಕ ಬಡಾವಣೆಯ ದಾವಣಗೆರೆ ಕ್ರೀಡಾ ಮತ್ತು ಮನೋರಂಜನಾ ಕೇಂದ್ರ, ಎಸ್.ಎಸ್. ಕೇರ್ ಟ್ರಸ್ಟ್, ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಕಾಲೇಜ್ ಆಫ್ ಡೆಂಟಲ್ ಸೈನ್ಸ್, ಎಸ್.ಎಸ್. ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯಾನಗರ ವಿನಾಯಕ ಬಡಾವಣೆ 3 ನೇ ಕ್ರಾಸ್‌ನಲ್ಲಿರುವ ಕ್ರೀಡಾ ಮತ್ತು ಮನೋರಂಜನಾ ಕೇಂದ್ರದ ಆವರಣದಲ್ಲಿ ಉಚಿತ ಸಮಾಲೋಚನೆ ಹಾಗೂ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 9880107630.

# ಶಾಲೆಯಲ್ಲಿ ಸೆಲ್ಫಿ ಬೇಡ ಎಂದಿದ್ದಕ್ಕೆ ಆತ್ಮಹತ್ಯೆ !

ಖಾರ್ಗೋನ್ (ಮಧ್ಯಪ್ರದೇಶ), ನ.8- ಶಾಲಾ ಆವರಣದಲ್ಲಿ ಮೊಬೈಲ್ ಬಳಸದಂತೆ ಹೇಳಿದ್ದಕ್ಕೆ ಹಾಗೂ ಸೆಲ್ಫಿ ತೆಗೆದುಕೊಳ್ಳುವುದನ್ನು ಪ್ರಶ್ನಿಸಿದ್ದಕ್ಕೆ ಸಿಟ್ಟಾಗಿದ್ದ 12 ನೇ ತರಗತಿ ವಿದ್ಯಾರ್ಥಿ ಬೆಟ್ಟದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಧ್ಯಪ್ರದೇಶದ ಖಾರ್ಗೋನ್ ಜಿಲ್ಲೆಯಲ್ಲಿ ಗುರುವಾರ ಸಂಭವಿಸಿದೆ.

ಖಾರ್ಗೋನ್ ಜಿಲ್ಲೆಯ ಗುಲ್ವಾಡ್‌ನ ಸರ್ಕಾರಿ ಸೆಕೆಂಡರಿ ಶಾಲೆಯ ವಿದ್ಯಾರ್ಥಿ ರಾಜ್ ಅನ್ಸಾರಿ (17) ಗುಲ್ವಾಡ್‌ನ ಸರ್ಕಾರಿ ಹಾಸ್ಟೆಲ್ ನಲ್ಲಿದ್ದುಕೊಂಡು ಓದುತ್ತಿದ್ದ ವಿದ್ಯಾರ್ಥಿ ರಾಜ್, ಬುಧವಾರ ತನ್ನ ಸ್ಮಾರ್ಟ್‌ಫೋನ್ ಅನ್ನು ಶಾಲೆಗೆ ತೆಗೆದುಕೊಂಡು ಬಂದು ಸೆಲ್ಫಿ ತೆಗೆದುಕೊಳ್ಳುತ್ತಿದ್ದ. ಈ ರೀತಿ ಮಾಡದಂತೆ ಶಿಕ್ಷಕರು ಬುದ್ದಿವಾದ ಹೇಳಿದ್ದರು. ಇದರಿಂದ ಕುಪಿತನಾಗಿದ್ದ ವಿದ್ಯಾರ್ಥಿ ಜಾಮ್ ಗೇಟ್ ಎಂಬ ಐತಿಹಾಸಿಕ ಸ್ಥಳದ ಬೆಟ್ಟದ ಮೇಲಿಂದ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಬದುಕುಳಿಯಲಿಲ್ಲ ಎಂದು ಖಾರ್ಗೋನ್ ಎಸ್‌ಪಿ ಧರ್ಮರಾಜ್ ಮೀನಾ ತಿಳಿಸಿದ್ದಾರೆ.

# ಶ್ವೇತಭವನದ ಸಿಬ್ಬಂದಿ ಮುಖ್ಯಸ್ಥೆಯಾಗಿ ವೈಲ್ಸ್

ವಾಷಿಂಗ್ಟನ್, ನ.8- ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ಅವರು ತಮ್ಮ ಪ್ರಚಾರ ತಂಡದ ವ್ಯವಸ್ಥಾಪಕಿ ಸೂಸನ್ ವೈಲ್ಸ್ ಅವರನ್ನು ಶ್ವೇತಭವನದ ಸಿಬ್ಬಂದಿ ವಿಭಾಗದ ಮುಖ್ಯಸ್ಥೆಯಾಗಿ ಗುರುವಾರ ನೇಮಕ ಮಾಡಿದ್ದಾರೆ.

ಈ ಉನ್ನತ ಹುದ್ದೆಗೇರಿದ ಮೊದಲ ಮಹಿಳೆ ಎಂಬ ಗೌರವ ಅವರಿಗೆ ಒಲಿದಿದೆ. 'ಅಮೆರಿಕವನ್ನು ಇನ್ನಷ್ಟು ಪ್ರಬಲ ರಾಷ್ಟ್ರವಾಗಿಸಲು ಸೂಸಿ (ಸೂಸನ್) ಅವರು ದಣಿವರಿಯದೇ ಕೆಲಸ ಮಾಡುವುದನ್ನು ಮುಂದುವರೆಸಲಿದ್ದಾರೆ. ಅಮೆರಿಕದ ಇತಿಹಾಸದಲ್ಲಿ ಶ್ವೇತಭವನದ ಸಿಬ್ಬಂದಿ ಮುಖ್ಯಸ್ಥರಾದ ಮೊದಲ ಮಹಿಳೆ ಎಂಬ ಗೌರವ ಪಡೆಯಲು ಸೂಸಿ ಅರ್ಹರು. ಅವರು ನಮ್ಮ ದೇಶವನ್ನು ಹೆಮ್ಮೆ ಪಡುವಂತೆ ಮಾಡುವುದರಲ್ಲಿ ಯಾವುದೇ ಅನುಮಾನ ಇಲ್ಲ' ಎಂದು ಟ್ರಂಪ್ ಹೇಳಿದ್ದಾರೆ.


## ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ ದಿ ವೆಡ್ಡಿಂಗ್ ಮಾಲ್.... ಚಾಮರಾಜ ಪೇಟೆ, ದಾವಣಗೆರೆ. 9686195327

## ವಿದೇಶ ಪ್ರವಾಸಕ್ಕೆ ಶುಭ ಹಾರೈಕೆ





ಪ್ರಪ್ರಥಮವಾಗಿ ಥೈಲ್ಯಾಂಡ್, ಬ್ಯಾಂಕಾಕ್, ಪಟಾಯ ವಿದೇಶ ಪ್ರವಾಸ ಕೈಗೊಂಡಿರುವ ಶ್ರೀ ಈ. ನಾಗರಾಜ್ (ಅಣಜಿ) ಶ್ರೀಮತಿ ಎನ್. ಪಾರ್ವತಿ ಹಾಗೂ ನಿವೃತ್ತ ಪಿಎಸ್‌ಐ ಎನ್. ಎಸ್. ರೇವಣಸಿದ್ದಪ್ಪ ಅವರುಗಳಿಗೆ ಶುಭ ಹಾರೈಕೆ.

ಶುಭ ಕೋರುವವರು : ಚಂದ್ರಣ್ಣ (ನೀಲಮ್ಮನ ತೋಟ), ಬಸವರಾಜ್ ಮೆಡಿಕಲ್, ಗಿರೀಶ್ ಅಕ್ಕಿ, ಮಂಜುನಾಥ ಗುತ್ತೂರು, ನಾಗರಾಜ್ ಕೇಬಲ್, ಕೊಟ್ರೇಶ್ ಮೆಡಿಕಲ್, ಬಸಣ್ಣ ದೊಡ್ಡಮನೆ, ಸಿದ್ದಣ್ಣ, ಶಿವಕುಮಾರ್ ಮೆಡಿಕಲ್ ಮತ್ತು ಡಿಸಿಎಂ ಗ್ರೂಪ್

॥ ಶ್ರೀ ಕಾಳಪುರ ಬಸವೇಶ್ವರ ಪ್ರಸನ್ನ ॥ ॥ ಶ್ರೀ ಸಿದ್ದೇಶ್ವರ ಪ್ರಸನ್ನ ॥





## ಸರ್ವಮಂಗಳ ಕಂಫರ್ಟ್

## ಪ್ರಾರಂಭೋತ್ಸವ ಆಹ್ವಾನ





ದಿ॥ ಶ್ರೀಮತಿ ಗಂಗಮ್ಮ ದಿ॥ ಶ್ರೀ ಡಿ.ಎಸ್. ಉಮಾಪತಿ
ಇವರ ಕೃಪಾಶೀರ್ವಾದದೊಂದಿಗೆ
ಶ್ರೀಮತಿ ಎಂ. ಗೀತ ಶ್ರೀ ಡಿ.ಎಸ್. ರುದ್ರಮುನಿ
ಮತ್ತು ಶ್ರೀಮತಿ ಸಂಗೀತ (ಸಿಂಧು) ಶ್ರೀ ಡಿ.ಯು. ನಾಗಭೂಷಣ್
ದೊಡ್ಡಪೇಟೆ, ಭರಮಸಾಗರ, ಚಿತ್ರದುರ್ಗ ತಾಲ್ಲೂಕು, ಜಿಲ್ಲೆ
ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ, ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀ ಮನೃಪ ಶಾಲಿವಾಹನ ಶಕ 1946ನೇ ಶ್ರೀ ಕ್ರೋಧಿನಾಮ ಸಂ॥ ದಕ್ಷಿಣಾಯನೇ ಶರದ್ ಋತು ಕಾರ್ತಿಕ ಮಾಸ ಶುಕ್ಲಪಕ್ಷ ನವಮಿ ದಿನಾಂಕ : 10.11.2024ನೇ ಭಾನುವಾರ ಮುಂಜಾನೆ 04.30 ರಿಂದ 06.00ರ ವರೆಗೆ ಸಲ್ಲುವ ಬ್ರಾಹ್ಮೀ ಲಗ್ನದ ಶುಭ ಮುಹೂರ್ತದಲ್ಲಿ ನಾವು ಭರಮಸಾಗರದ ಪಿ.ಬಿ. ರಸ್ತೆ (ಚಿತ್ರದುರ್ಗ ದಾವಣಗೆರೆ) ಐ.ಬಿ. ಹತ್ತಿರ ನೂತನವಾಗಿ ಕಟ್ಟಿಸಿರುವ

"ಸರ್ವಮಂಗಳ ಕಂಫರ್ಟ್"

ಪ್ರಾರಂಭೋತ್ಸವವನ್ನು ಏರ್ಪಡಿಸಲಾಗಿದೆ. ತಾವುಗಳು ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ, ನಮ್ಮ ಆತಿಥ್ಯ ಸ್ವೀಕರಿಸಿ, ಆಶೀರ್ವದಿಸಿ, ಶುಭ ಕೋರಬೇಕಾಗಿ ಕೋರುವ.



ತಮ್ಮ ಆಗಮನಾಭಿಲಾಷಿಗಳು :
ದಿ। ದೊಡ್ಡಮನೆ ಸರ್ವಮಂಗಳಮ್ಮ ಶ್ರೀ ಸಿದ್ದಬಸಪ್ಪನವರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ದೊಡ್ಡಮನೆ ವಂಶಸ್ಥರು

ಇವರಿಂದ : ಶ್ರೀ ಡಿ.ಎಸ್. ರುದ್ರಮುನಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಕರ್ನಾಟಕ ಕುಕ್ಕುಟ ಮಹಾ ಮಂಡಳಿ, ಬೆಂಗಳೂರು.
ಡಿ.ಯು. ನಾಗಭೂಷಣ್, ಡಾ॥ ಅಭಿಷೇಕ್, ಡಾ॥ ಅಕ್ಷಿತ್, ಫೋ. : 9886523466, 8073196763, 9036242366

ಸರ್ವಮಂಗಳ HP ಗ್ಯಾಸ್ — ಬಿದರಕೆರೆ ರೋಡ್, ಭರಮಸಾಗರ, ಚಿತ್ರದುರ್ಗ ತಾ॥
ಸಾಯಿನಾಥ್ ಟ್ರೇಡಿಂಗ್ ಕಂ — ದೊಡ್ಡಪೇಟೆ, ಬಿಳಿಚೋಡು ರಸ್ತೆ, ಭರಮಸಾಗರ.

ತಮ್ಮ ಸುಖಾಗಮನವನ್ನು ಬಯಸುವವರು : ಬಂಧು-ಮಿತ್ರರು
ಸ್ವಾಗತ ಕೋರುವವರು : ಅಕ್ಷರ, ಅದ್ವಿಕ್

ಆತ್ಮೀಯರೇ... ಆಹ್ವಾನ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas